# ೮೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮೈಸೂರು

ದಿನಾಂಕ : ೨೪, ೨೫ ಮತ್ತು ೨೬ - ನವಂಬರ್ - ೨೦೧೭

ಸಮ್ಮೇಳನಾಧ್ಯಕ್ಷರ ಭಾಷಣ



ಪ್ರೊ.ಚಂದ್ರಶೇಖರ ಪಾಟೀಲ (ಚಂಪಾ)

**ಈ ಮಹಾಸಭೆಗೆ ಮೊದಲು ವಂದಿಸುತ್ತ,**

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆಯುತ್ತಿರುವ ಈ ಅಖಿಲ ಭಾರತ ೮೩ ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿದ ಸನ್ಮಾನ್ಯ ಮುಖ್ಯಮಂತ್ರಿಗಳೂ, ನನ್ನ ಆತ್ಮೀಯ ಗೆಳೆಯರೂ ಆಗಿರುವ ಶ್ರೀ ಸಿದ್ಧರಾಮಯ್ಯನವರೇ, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ. ಮನು ಬಳಿಗಾರ್ ಅವರೇ, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ. ಬರಗೂರು ರಾಮಚಂದ್ರಪ್ಪನವರೇ, ಮಾನ್ಯ ಮಹಾಪೌರ ಶ್ರೀ ರವಿಕುಮಾರ ಅವರೇ, ಮಾನ್ಯ ಸಂಸದರೇ, ಶಾಸಕರೇ, ಸ್ವಾಗತ ಸಮಿತಿಯ ಅಧ್ಯಕ್ಷ ಡಾ. ಎಚ್.ಸಿ. ಮಹದೇವಪ್ಪನವರೇ, ನಾಡಿನ ಬಾನಂಗಳದ ಅಡಿಯಲ್ಲಿ ಸಿಂಗಾರಗೊಂಡಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ ಮಹಾಮಂಟಪದ ರಾಷ್ಟ್ರಕವಿ ಕುವೆಂಪು ಪ್ರಧಾನ ವೇದಿಕೆಯ ಮೇಲಿರುವ ಎಲ್ಲ ಗಣ್ಯರೇ, ನಮ್ಮ ಸಾಂಸ್ಕೃತಿಕ ಕರ್ನಾಟಕದ ಎಲ್ಲ ದಿಕ್ಕುಗಳಿಂದ ಸಮ್ಮೇಳನಕ್ಕೆಂದೇ ಬಂದಿರುವ ಎಲ್ಲ ನನ್ನವರೇ–

ಮೊದಲು ನಿಮಗೆಲ್ಲ ಶರಣು ಶರಣಾರ್ಥಿ.

*‘‘ಕನ್ನಡ ಪ್ರಜ್ಞೆಯೇ ಅಪ್ಪಟ ಜಾತ್ಯತೀತವಾದುದು. ಜಾತಿ–ಧರ್ಮಗಳ ಹೆಸರಲ್ಲಿ ಸಮಾವೇಶಗೊಳ್ಳುವುದು ಸಮಾಜದ ವಿಘಟನೆಯ ಸಂಕೇತ. ಆದರೆ ಪ್ರತಿ ವರ್ಷ ಕನ್ನಡದ ಹೆಸರಲ್ಲಿ ಲಕ್ಷಾಂತರ ಜನ ಸೇರಿ ಸಂಭ್ರಮಿಸುವುದು ಕನ್ನಡ ಪ್ರಜ್ಞೆಯನ್ನು ಮತ್ತಷ್ಟು ಗಟ್ಟಿಗೊಳಿಸಿದಂತೆಯೇ. ಆದಿಕವಿ ಪಂಪ ‘ಮನುಷ್ಯ ಜಾತಿ ತಾನೊಂದೆ ವಲಂ’ ಎಂದರು. ಇದು ಕನ್ನಡ ಸಾಹಿತ್ಯ ಪರಿಷತ್ತಿನ ಘೋಷವಾಕ್ಯವಾಗಿದೆ. ಕವಿ ರಾಜ ಮಾರ್ಗಕಾರನಂತೂ ಸಹಿಷ್ಣುತೆ ಕುರಿತು ಬಹು ದೊಡ್ಡ ಆದರ್ಶ ಕಟ್ಟಿಕೊಟ್ಟಿದ್ದಾನೆ. ‘‘ಕಸವರಂ ಮೆಂಬುದು ನೆರೆ ಸೈರಿಸಲಾರ್ದೊಡೆ ಪರಧರ್ಮಮುಂ ಪರ ವಿಚಾರಮುಂ’’ ........ ಪರಧರ್ಮ ಸಹಿಷ್ಣುತೆ ಮತ್ತು ಜಾತ್ಯತೀತ ನಿಲುವು ಕನ್ನಡ ಪ್ರಜ್ಞೆಯ ಭಾಗ ವಾಗಿದ್ದರಿಂದ ಸಹಜವಾಗಿಯೇ ಸಾಮಾಜಿಕ ನ್ಯಾಯ ಪರಿಕಲ್ಪನೆ ಆಚರಣೆಯಲ್ಲಿ ಬಂದಿದೆ.*

*ವಚನ ಚಳುವಳಿ ಅಕ್ಷರಶಃ ತತ್ವಾಧಾರಿತ ಸಂಘಟನೆ. ಬಸವಣ್ಣನವರದು ‘‘ಇವ ನಮ್ಮವ ಇವ ನಮ್ಮವ’’ ಎಂದು ಎಲ್ಲರನ್ನು ಒಳಗೊಳ್ಳುವ ಬಹು ದೊಡ್ಡ ಜನಾಂದೋಲನ.... ಈ ಪರಂಪರೆಯ ಮುಂದುವರಿಕೆಯಾಗಿ ಮೈಸೂರು ಸಂಸ್ಥಾನದ ಅರಸರು ರಾಜಶಾಹಿ ವ್ಯವಸ್ಥೆಯಲ್ಲೂ ಜನತಂತ್ರದ ಬೆಳೆ ಬೆಳೆದರು.*

*ಕನ್ನಡ ಸಾಹಿತ್ಯ ಪರಿಷತ್ತಿನಂತಹ ಒಂದು ಸಾಂಸ್ಕೃತಿಕ ಸಂಘಟನೆ ಹುಟ್ಟು ಹಾಕುವ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕನ್ನಡ ಪ್ರಜ್ಞೆ ಮತ್ತಷ್ಟು ಕ್ರಿಯಾಶೀಲ ವಾಗುವಂತೆ ನೋಡಿಕೊಂಡರು. ೧೯೧೫ ರಲ್ಲಿ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತು ಈ ಹೊತ್ತು ಕನ್ನಡಿಗರ ಹೆಮ್ಮೆಯ ಪ್ರಾತಿನಿಧಿಕ ಸಂಸ್ಥೆಯಾಗಿ ಬೆಳೆದು ನಿಂತಿದೆ. ಇದೆಲ್ಲ ಸಾಧ್ಯವಾದುದು ಮೈಸೂರು ಅರಸರ ಹಾಗೂ ಸರ್. ಎಂ. ವಿಶ್ವೇಶ್ವರಯ್ಯ ನವರಂತಹ ದಿವಾನರುಗಳ ಕಾರಣಕ್ಕೆ''*

ಕಸಾಪ ರಾಜ್ಯಾಧ್ಯಕ್ಷ ಡಾ. ಮನು ಬಳಿಗಾರ್ ಅವರು ಈಗಾಗಲೇ 'ಕನ್ನಡ ನುಡಿ' ಯ ಮೂಲಕ (ಆಗಸ್ಟ್-ಸಪ್ಟೆಂಬರ್ ೨೦೧೭) ನಿಮ್ಮನ್ನು ಈ ಸಾಂಸ್ಕೃತಿಕ ನಗರದ ಕನ್ನಡ ಜಾತ್ರೆಗೆ ಬರಮಾಡಿಕೊಂಡಿದ್ದಾರೆ. ಅವರ ದನಿಗೆ ನನ್ನ ದನಿಯನ್ನೂ ಸೇರಿಸಿ ನಾನೂ ತಮಗೆ ಪ್ರೀತಿಯ ಸ್ವಾಗತ ಕೋರುತ್ತೇನೆ.

●

ಕಳೆದ ಅರವತ್ತು ವರ್ಷಗಳ ನನ್ನ ಸಾಹಿತ್ಯಿಕ ಸಾಮಾಜಿಕ ಬದುಕಿನಲ್ಲಿ ಅನೇಕ ಸಲ ಅನೇಕ ಕಡೆ ಅನೇಕ ನೆಲೆಗಳಲ್ಲಿ ನಿಮ್ಮನ್ನು ಎದುರುಗೊಂಡವ ನಾನು. ನಾವು ಮಾತಾಡಿದ್ದೇವೆ, ಚರ್ಚೆ ಮಾಡಿದ್ದೇವೆ, ಜಗಳಾಡಿದ್ದೇವೆ. ಈ 'ನಾನು' ಎಂಬುದು 'ನಾವು' ಎಂಬುದರ ಸಂಕ್ಷಿಪ್ತ ರೂಪ; ಹಾಗೆಯೇ, ಈ 'ನಾವು' ಎಂಬುದು 'ನಾನು' ಎಂಬುದರ ವಿಕಸಿತ ವಿನ್ಯಾಸ. ಈ ಇಡಿ ಬಿಡಿಗಳ ಸಮಷ್ಟಿ ಸಾಂಗತ್ಯದಲ್ಲಿಯೇ ನಮ್ಮ ಬದುಕು- ಅಂತ ನಂಬಿದವ ನಾನು. ಹೀಗಾಗಿ ನನ್ನ ಮಾತುಗಳಲ್ಲಿ ನಿಮ್ಮ ಮಾತನ್ನೇ ನೀವು ಕೇಳಬಹುದು; ನಿಮ್ಮ ಕೇಳುವಿಕೆಯಲ್ಲಿ ನನ್ನ ಪಾಲುಗಾರಿಕೆಯೂ ಇರಬಹುದು.

ಬೆಂಗಳೂರಿನಿಂದ ಬೀದರಿನವರೆಗೆ ಹಬ್ಬಿರುವ ವಿಸ್ತಾರವಾದ ಕನ್ನಡ ನಾಡು ವಿಭಿನ್ನ ಸಂಸ್ಕೃತಿಗಳ, ವೈವಿಧ್ಯಮಯ ಭೂವಲಯವನ್ನೊಳಗೊಂಡ ಸಂಪದ್ಭರಿತ ರಾಜ್ಯ. ಯಾವುದೇ ಒಂದು ಪ್ರದೇಶಕ್ಕೆ ನೀಡುವ ಒತ್ತು ವಿಕಾರಗಳ ಬೆಳವಣಿಗೆಗೆ ಅವಕಾಶ ಮಾಡಿಕೊಡುತ್ತದೆ. ಈಗ ಆಗಿರುವುದೂ ಅದೇ.

**– ನರಹಳ್ಳಿ ಬಾಲಸುಬ್ರಹ್ಮಣ್ಯ**



ಈಗ ೮೩ ನೆಯ ಸಮ್ಮೇಳನಾಧ್ಯಕ್ಷನಾಗಿ ನಿಮ್ಮೆದುರು ನಿಂತಿರುವೆ. ಮೊದಲು ಬರಿ 'ಅಧ್ಯಕ್ಷ' ಅಂದರೆ ಸಾಕಾಗಿತ್ತು; ಈಗ ಸ್ವಲ್ಪ ಮುಂಬಡ್ತಿ ಸಿಕ್ಕು 'ಸರ್ವಾಧ್ಯಕ್ಷ' ಅನ್ನಲಾಗುತ್ತಿದೆ. ಇದರ ಅರ್ಥ: ಬರಿ ಮೊದಲ ದಿನ 'ಅಧ್ಯಕ್ಷೀಯ' ಭಾಷಣ ಬಿಗಿದರೆ ಸಾಲದು; ಉಳಿದ ಮೂರು ದಿನವೂ ಪ್ರಧಾನ ವೇದಿಕೆ ಮತ್ತು ಸಮಾನಾಂತರ ವೇದಿಕೆಯ ಗೋಷ್ಠಿಗಳಲ್ಲೂ ಹಾಜರಾತಿ ಇರಬೇಕು. ಆ ಕೆಲಸ ನಾನು ಮಾಡುವೆ.

ಇಂಥದೊಂದು ಗೌರವದ ಸ್ಥಾನಕ್ಕೆ ನನ್ನನ್ನು ಪ್ರೀತಿಯಿಂದ, ಅಭಿಮಾನದಿಂದ ಆಯ್ಕೆ ಮಾಡಿದ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ, ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೆ ನಾನು ಋಣಿ.

●

ಇದು ಮೈಸೂರಿನಲ್ಲಿ ನಡೆಯುತ್ತಿರುವ ಐದನೆಯ ಸಮ್ಮೇಳನ. ಕರ್ನಾಟಕ ಏಕೀಕರಣಕ್ಕೆ ಮುನ್ನ ಮೂರು ಸಮ್ಮೇಳನ: **ಶ್ರೀ ಎಚ್. ವಿ. ನಂಜುಂಡಯ್ಯ** (೧೯೧೭) ; **ಶ್ರೀ ಆಲೂರು ವೆಂಕಟರಾಯರು** (೧೯೩೦) ; **ಶ್ರೀ ಶಿವರಾಮ ಕಾರಂತರು** (೧೯೫೫). ಏಕೀಕರಣದ ನಂತರ – **ಶ್ರೀ ಕೆ.ಎಸ್. ನರಸಿಂಹಸ್ವಾಮಿ** (೧೯೯೦). ಈ ಮಹಾನು ಭಾವರ ಪಟ್ಟಿಯ ಚುಂಗಿಗೆ ಈ ವರ್ಷ ನನ್ನದೂ ಒಂದು ಹೆಸರು ಸೇರಿತಲ್ಲ- ಎಂಬ ಖುಶಿ ನನ್ನದು.

●

ಈ ೮೨ ಸಮ್ಮೇಳನಗಳ ಅಧ್ಯಕ್ಷೀಯ ಭಾಷಣಗಳನ್ನು ಹಾಗೆಯೇ ಒಮ್ಮೆ ತಿರುವಿ ಹಾಕಿದಾಗ ಹನ್ನೊಂದು ದಶಕಗಳ ಬೀಸಿನಲ್ಲಿ ಒಂದು ಮೆಗಾ- ಧಾರಾವಾಹಿಯ ಎಪಿಸೋಡುಗಳನ್ನು ನೋಡಿದ ಅನುಭವ. ಅನೇಕ ಪೀಳಿಗೆಗಳ ಕಣ್ಣ- ಕ್ಯಾಮರಾ ಗಳಲ್ಲಿ ಮೂಡಿದ ನಮ್ಮ ಚೆಲುವ ಕನ್ನಡ ನಾಡಿನ ಬಿಂಬಗಳ ಚಿತ್ರಮಾಲೆ ಒಂದೊಂದಾಗಿ ಬಿಚ್ಚಿಕೊಂಡ ಹಾಗೆ.

ಮೈಸೂರಿನ ನಾಲ್ವರು ಅಧ್ಯಕ್ಷರ ಕೆಲವು ಉಕ್ತಿಗಳು–ಈಗ ನಮ್ಮ ಮೆಲುಕಿಗಾಗಿ :

- **ಶ್ರೀ ಎಚ್. ವಿ. ನಂಜುಂಡಯ್ಯನವರು (೦೮ ಜೂನ್ ೧೯೧೭)**

  *''ಕನ್ನಡ ಭಾಷೆಯನ್ನೂ ಸಾಹಿತ್ಯವನ್ನೂ ಪುಷ್ಟಿಗೊಳಿಸಿ ಅಭಿವೃದ್ಧಿಗೆ ತಂದು ಕನ್ನಡ ನಾಡುಗಳ ಜನರೆಲ್ಲರನ್ನೂ ಒಟ್ಟುಗೂಡಿಸಿ ಅವರಲ್ಲಿ ಭಾಷಾ ವಿಷಯದಲ್ಲಿ ಪರಸ್ಪರ ಐಕ್ಯಮತ್ಯವೂ ಸೌಹಾರ್ದವೂ ದಿನದಿನಕ್ಕೆ ಹೆಚ್ಚುವಂತೆ ಮಾಡುವುದೇ ಕರ್ನಾಟಕ ಸಾಹಿತ್ಯ ಪರಿಷತ್ತಿನ ಮುಖ್ಯೋದ್ದೇಶವಾಗಿದೆ''.*

(ಶ್ರೀಮಾನ್ ಮಹಾರಾಜರವರ ೩೪ನೆಯ ವರ್ಧಂತ್ಯುತ್ಸವದ ದಿನವದು. ಅವರೇ ಸಮ್ಮೇಳನದ ಪ್ರಾರಂಭೋತ್ಸವದ ಅಧ್ಯಕ್ಷರು.)

- **ಶ್ರೀ ಆಲೂರು ವೆಂಕಟರಾಯರು (೦೫ ಅಕ್ಟೋಬರ್ ೧೯೩೦)**

  *''ಕರ್ನಾಟಕದ ವಾಙ್ಮಯವೆಂದರೆ ಭರತಭೂಮಿಯ ಜನಜೀವನವನ್ನು ಒಂದು ವಿಶಿಷ್ಟವಾದ ಎರಕದಲ್ಲಿ ಹಾಕಿಮಾಡಿದ ಮೂರ್ತಿ. ಆದುದರಿಂದ ಕರ್ನಾಟಕದ ವಾಙ್ಮಯದಲ್ಲಿ ಇವೆರಡೂ ಸಂಸ್ಕೃತಿಗಳು, ಎಂದರೆ ಭರತಖಂಡ ಮತ್ತು ಕರ್ನಾಟಕ – ಇವೆರಡೂ ಸಂಸ್ಕತಿಗಳು ಪ್ರತಿಫಲಿತವಾಗಬೇಕು. ನಮ್ಮ ರೋಮ ರೋಮ ಗಳಲ್ಲಿ ರಾಷ್ಟ್ರೀಯತ್ವವೂ ಕರ್ನಾಟಕತ್ವವೂ ತುಂಬಿದ್ದರೆ ಮಾತ್ರವೇ ನಮ್ಮಿಂದ ಅತ್ಯಂತ ಉಜ್ವಲವಾದ ವಾಙ್ಮಯವು ಹುಟ್ಟಬಹುದು; ಇಲ್ಲದಿದ್ದರೆ ಎಂದೂ ಹುಟ್ಟಲಾರದು. ಸಾರಾಂಶವೇನೆಂದರೆ– ನಾವು ವಿಶ್ವಸಂಸ್ಕೃತಿಯನ್ನೊಳಗೊಂಡ ರಾಷ್ಟ್ರೀಯತ್ವವನ್ನೂ ಕರ್ನಾಟಕತ್ವವನ್ನೂ ಯಾವಾಗಲೂ ಅನುಸಂಧಾನ ಮಾಡಿ ಕೊಂಡೇ ವಾಙ್ಮಯವನ್ನು ಹುಟ್ಟಿಸುವುದಕ್ಕೆ ಪ್ರವೃತ್ತರಾಗಬೇಕು''.*

  *''ಚತುರ್ಮುಖವಾದ ಕರ್ನಾಟಕವು ಏಕಮುಖವಾಗಬೇಕಾಗಿದೆ. ಆಗ ಅದರ ನಾಲ್ಕು ಮೋರೆಗಳನ್ನು ಏಕಮುಖವಾಗಿ ಮಾಡುವುದಕ್ಕೋಸ್ಕರ ಅಖಿಲ ಕರ್ನಾಟಕ ವಿಶ್ವವಿದ್ಯಾಲಯವು ಅವಶ್ಯವಾಗಿ ಬೇಕಾಗಿದೆ. ಅದು ಇಲ್ಲದವರೆಗೆ ನಮ್ಮ ಸಾಹಿತ್ಯದೇವತೆ ಪರಭ್ರಷ್ಟೆ; ಅದರ ಮೇಲೆಯೇ ಅವಳ ಪ್ರಾಣ ಪ್ರತಿಷ್ಠೆ''.*

- **ಶ್ರೀ ಶಿವರಾಮ ಕಾರಂತರು (೧೦ ಜೂನ ೧೯೫೫)**

  *''ಕನ್ನಡ ಭಾಷೆಯ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಸಾಹಿತಿಗಳಾದ ನಮ್ಮ ಹೊಣೆ ಸಾಮಾನ್ಯ ಜನತೆಯ ಹೊಣೆಗಿಂತಲೂ ಹೆಚ್ಚಿನದು. ನಾಡಿನ ಬರಹಗಾರ, ತಾನಾಗಿ ಬರೆಯುತ್ತಿರುವ ವ್ಯಕ್ತಿಯಾಗಿದ್ದರೂ, ತನ್ನ ಜನಗಳ*

> ತಮ್ಮ ಮನೆ ಭಾಷೆ ಯಾವುದೇ ಆಗಿರಲಿ. ಕನ್ನಡ ಭಾಷೆಯ ಮೂಲಕ ಈ ನಾಡಿನ ಜನತೆ ಒಂದಾಗಿ ಬೆಸೆಯಲ್ಪಟ್ಟಿರುವುದು ಸುಳ್ಳಲ್ಲ. ಕನ್ನಡವೆಂದರೆ ಇಂಥ ವೈವಿಧ್ಯಮಯ ಸಂಸ್ಕೃತಿಗಳ ಒಕ್ಕೂಟ
>
> **– ವಾರ್ತಾ ಭಾರತಿ/ ಸಂಪಾದಕೀಯ**



*ಸಲುವಾಗಿ ಆತ ಶ್ರಮಿಸಬೇಕು. ಅವರ ಬದುಕಿನ ಮೂಕ ಜೀವನಕ್ಕೆ ಅವನು ನಾಲಿಗೆಯಾಗಬೇಕು. ಅವರ ತಿಳಿವಿನ ಅಂಧಕಾರಕ್ಕೆ ಆತ ಬೆಳಕಾಗಬೇಕು. ಇವನ ಸಾಹಿತ್ಯ ಅವರ ಜೀವನದ ಚಿತ್ರಭಿತ್ತಿಯಾಗಬೇಕು''.*

*ಸಾಹಿತ್ಯ ಮತ್ತು ಬದುಕು ಹತ್ತಿರ ಹತ್ತಿರ : ಅವು ಅವಳಿ ಜವಳಿ; ಒಂದರ ಉಸಿರು ಇನ್ನೊಂದರ ಉಸಿರು; ಒಂದರ ಭಾವ ಇನ್ನೊಂದರ ಜೀವ. ಬದುಕು ಪ್ರೇರಿಸದ ಸಾಹಿತ್ಯ ಬೊಬ್ಬಾಟ. ಬದುಕಿನಿಂದ, ಬದುಕಿನ ಅನುಭವದಿಂದ ಸ್ಫೂರ್ತಿ ಸೊಗಸು ಶಕ್ತಿಗಳನ್ನು ಗಳಿಸದೆಯೇ ಸುರಿಸುವ ಮಾತಿನ ಮಳೆ. ಜನತೆಯ ಕಿವಿ ಕಣ್ಣುಗಳಿಗೆ ಕೊಡುವ ಕರಕರೆ.*

*''ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಮಾಡಬಲ್ಲ ಭಾಷೆ ಯಾವುದು? ಕನ್ನಡ ಜನಗಳ ಪಾಲಿಗೆ ಅದು ಕನ್ನಡ; ಅದೊಂದೇ. ಇಂಗ್ಲಿಷ್ ಅಲ್ಲ, ಹಿಂದೀ ಅಲ್ಲ, ಕನ್ನಡ ನಾಡಿನ ಜನಕ್ಕೆ ಕನ್ನಡವೊಂದೇನೆ. ವಿಚಾರ ವಿನಿಮಯದಿಂದ ಸಮಾಜ ಹುಟ್ಟುತ್ತದೆ. ಬೆಳೆಯುತ್ತದೆ. ನಾಗರಿಕತೆ ಹುಟ್ಟಿದ್ದು ಅದರಿಂದಲೇ; ಬೆಳೆದುದು ಅದರಿಂದಲೇ. ಅಂಥ ವಿಚಾರ ವಿನಿಮಯ ನಡೆಯಬೇಕಾದ್ದು 'ಭಾಷೆ'ಯ ಮೂಲಕ. ನಾಟ್ಯದಿಂದಲ್ಲ, ಚಿತ್ರಕಲೆಯಿಂದಲ್ಲ, ಹಾಗಾದುದರಿಂದ ಕನ್ನಡದ ಜನಕ್ಕೆ ಕನ್ನಡ ಭಾಷೆ ಬದುಕಿನ ಉಸಿರು. ಅದನ್ನು ಬೇರೊಂದು ಭಾಷೆ ಬಂದು ಉಚ್ಚಾಟನೆ ಮಾಡಿ, ಅದರ ಸ್ಥಾನವನ್ನು ಕಸಿದುಕೊಂಡು, ಅದು ಸಲ್ಲಿಸುವ ಸೇವೆಯನ್ನು ತಾನು ಎಂದೂ ಮಾಡಲಾರದು''.*

- **ಶ್ರೀ ಕೆ.ಎಸ್. ನರಸಿಂಹಸ್ವಾಮಿ (೨೮ ಡಿಸೆಂಬರ ೧೯೯೦)**

  *''ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ– ಮುಂತಾದ ವಿವಿಧ ಕಾವ್ಯ ಪ್ರಕಾರಗಳು : ಒಂದೇ ಹೊಳೆಯ ಹಲವಾರು ಘಟ್ಟಗಳು. ನೀರು ಶುಚಿಯಾಗಿದ್ದರೆ ಎಲ್ಲಿ ಮಿಂದರೂ ಪುಣ್ಯ ಲಭಿಸುತ್ತದೆ. ಇನ್ನು ಈ ಶತಮಾನದ ಮುಗಿವಿನೊಳಗೆ ಇನ್ನೆಷ್ಟು ಪ್ರಕಾರಗಳು ಬರುತ್ತವೋ ಯಾರು ಬಲ್ಲರು?*

  *''ನಮ್ಮ ರಾಷ್ಟ್ರವು ಈಗ ತುಂಬ ತುಂಬ ಕಷ್ಟದ ಕಾಲವನ್ನು ಎದುರಿಸುತ್ತಿದೆ : ಜಾತಿ ದ್ವೇಷಗಳು ಜನತೆಯನ್ನು ಹಿಂಸೆಯ ಪ್ರಪಾತದ ಅಂಚಿಗೆ ಒಯ್ಯುತ್ತಿವೆ.*

> *ಕವಿಗಳು ಸಾಹಿತಿಗಳು ಕಲಾವಿದರು ರಾಷ್ಟ್ರದ ಏಕತೆಯನ್ನು ಸಾಧಿಸಲು ತಮ್ಮ ಲೇಖನಿಯನ್ನು ಮುಡಿಪಾಗಿಡಬೇಕಾಗಿದೆ''.*

ನೋಡಿರಿ. ಕಾಲಘಟ್ಟ ಬೇರೆ; ಸನ್ನಿವೇಶ ಬೇರೆ; ಸಮಸ್ಯೆಗಳು – ಸವಾಲುಗಳು ಬೇರೆ – ಆದರೆ ಕನ್ನಡ ಬರಹಗಾರರ ತುಡಿತ– ಮಿಡಿತ ಮಾತ್ರ ಒಂದೇ : ಕನ್ನಡ – ಕನ್ನಡಿಗ –ಕರ್ನಾಟಕ–ಕನ್ನಡತ್ವ ; ಸಾಹಿತಿಗಳ ಸಾಮಾಜಿಕ ಹೊಣೆಗಾರಿಕೆ; ಪ್ರಾದೇಶಿಕತೆ– ರಾಷ್ಟ್ರೀಯತೆ ......ಆದಿಕವಿ ಪಂಪನಿಂದಾದಿಯಾಗಿ ಈ ವರೆಗೂ ಭೂಮಿಯೊಡಲ ಅಂತರ್ಗಾಮಿ ನಿಯಂತೆ ಸದಾ ಜೀವಂತವಾಗಿ ಹರಿಯುತ್ತ ಬಂದಿರುವುದೇ ಕನ್ನಡದ ಹೆಚ್ಚುಗಾರಿಕೆ. ಇಂಥ ನದಿಯ ಅಲೆಯಾಗಿರುವುದೇ ನನ್ನಂಥ ಅಕ್ಷರ ಜೀವಿಗಳ ಕನಸು :

ಉಳಿದ ನದಿಗಳ ಹಾಗೆ ನೀನಲ್ಲ ಶಾಲ್ಮಲೆ

ನಿನ್ನ ಕಂಡವರಿಲ್ಲ ನಿನ್ನೊಳಗೆ ಮೈಯ ತೊಳಕೊಂಡವರಿಲ್ಲ
ನಿನ್ನ ಉಂಡವರಿಲ್ಲ, ನಿನ್ನೊಳಗೆ ಕಳಕೊಂಡವರಿಲ್ಲ
ಉಗಮವೆಲ್ಲೋ ನಿನ್ನದು ನಿನ್ನ ಸಂಗಮವೆಲ್ಲೋ
ನೀನು ಹರಿಯುತಿರುವುದು ಮಾತ್ರ ಒಂದೇ ಖರೆ.

ಬಹುಶಃ
ನಾನು ಬದುಕಬೇಕೆಂದಿರುವ ಬದುಕಿನಂತೆ.
ನಾನು ಬರೆಯಬೇಕೆಂದಿರುವ ಕಾವ್ಯದಂತೆ.

**(ಶಾಲ್ಮಲಾ ನನ್ನ ಶಾಲ್ಮಲಾ / ೧೯೯೦)**

•

ಏಕ ಸಂಸ್ಕೃತಿಯನ್ನು ಬಯಸುವ 'ರಾಷ್ಟ್ರವಾದಿ'ಗಳ ಜತೆಗೆ ಬಹು ಸಂಸ್ಕೃತಿಗಳನ್ನು ಪ್ರತಿಪಾದಿಸುವ 'ಪ್ರಾದೇಶಿಕ' ಶಕ್ತಿ ಮುಖಾಮುಖಿಯಾಗಿದೆ. ಇದರ ಆಳದಲ್ಲೇ ಈಗ ಕನ್ನಡ ರಾಷ್ಟ್ರೀಯತೆಯ ಪ್ರಶ್ನೆಯೂ ಮುನ್ನೆಲೆಗೆ ಬರುತ್ತಿದೆ.

**– ದಿನೇಶಕುಮಾರ ಎಸ್.ಸಿ.**



ನನ್ನ ಬರವಣಿಗೆಯ ಬೀಸು ಅರವತ್ತು ವರುಷಗಳದ್ದು ಅಂತ ಹೇಳಿದೆ. ಇದು ೨೦೧೭. ನನ್ನ ನೆನಪಿನ ಟ್ರೇನು ಹಿಂಬರಕಿ ಹೋದರೆ ಗಕ್ಕನೆ ನಿಲ್ಲುವುದು ೧೯೫೭ರ ಧಾರವಾಡದ ನಿಲ್ದಾಣದಲ್ಲಿ. ನನ್ನ ಮೊಟ್ಟಮೊದಲ ಕವನ ಗರಿಬಿಚ್ಚಿ ಹಾರಿದ್ದು ೧೯೫೬–೫೭ರ ಸುಮಾರಿಗೆ. ಆಗ ಹಾವೇರಿಯ ಮುನ್ಸಿಪಲ್ ಹೈಸ್ಕೂಲಿನಿಂದ ಎಸ್. ಎಸ್.ಸಿ ಮುಗಿಸಿ ಧಾರವಾಡದ ಕರ್ನಾಟಕ ಕಾಲೇಜಿಗೆ ಬಂದ ಮೊದಲ ವರ್ಷ. ಪಾಯಜಾಮಾ, ಹಾಫ್‌ಶರ್ಟು, ಗಾಂಧಿಟೊಪ್ಪಿಗೆಯಿಂದ ಅಲಂಕೃತನಾದ, ಹತ್ತೀಮತ್ತೂರೆಂಬ ಹಳ್ಳಿಯ ಈ ಹೈದನಿಗೆ ಒಂದು ಸಣ್ಣ ಪ್ರಭಾವಳಿಯೂ ಇತ್ತು. (ಎಸ್‌ಎಸ್‌ಸಿಯಲ್ಲಿ ನಾನು ಅಂದಿನ ಮುಂಬೈ ಪ್ರಾಂತಕ್ಕೆ ಒಬ್ಬ ರ್‍ಯಾಂಕ್ ವಿದ್ಯಾರ್ಥಿ) ಧಾರವಾಡ : ನನ್ನ ವಾರಿಗೆಯ ವರಿಗೆಲ್ಲ ಒಂದು ಕನಸು. ೧೯೫೭: ಮತ್ತೊಂದು ಕಾರಣಕ್ಕಾಗಿ ನನ್ನ ಭಾವ ಕೋಶದ ಒಂದು ಅಮೂಲ್ಯ ಕಾಲಬಿಂದು. ಆ ವರ್ಷ ಧಾರವಾಡದಲ್ಲಿ ಜರುಗಿದ ೩೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು : ಕುವೆಂಪು. ಆರ್.ಎಲ್.ಎಸ್ ಹೈಸ್ಕೂಲಿನ ವಿಶಾಲ ಪೆಂಡಾಲಿನ ತುದಿಯಲ್ಲಿ ನಿಂತಿದ್ದ ಬೆರಗುಗಣ್ಣಿನ ಒಬ್ಬ ಹುಡುಗನ ಬಿಂಬದಲ್ಲಿ ಒಂದು ನೀಲಾಂಜನದ ಜ್ಯೋತಿಯಂತೆ ದಾಖಲಾದವರು ಕುವೆಂಪು.

ಮುಂದೆ ವಿದ್ಯಾರ್ಥಿಯಾಗಿ, ಪ್ರಾಧ್ಯಾಪಕನಾಗಿ, ಅಖಂಡ ನಲವತ್ತು ವರ್ಷ– (೧೯೫೬–೯೬) – ಧಾರವಾಡ ನನ್ನ ಕಾಯಕ ಭೂಮಿಯಾಯಿತು. ೧೯೭೦ರ ದಶಕದ ಪ್ರಾರಂಭದಲ್ಲಿ ಈ ನಾಡು ಕಂಡ ಜಾತಿವಿನಾಶ ಆಂದೋಲನ, ವೈಚಾರಿಕ ಚಳುವಳಿಯ ಸಂದರ್ಭದಲ್ಲಿ 'ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ದ ಮೊದಲ ಸಮ್ಮೇಳನದ ಉದ್ಘಾಟಕರು– ಕುವೆಂಪು (೧೯೭೪). ಇದು ನನ್ನ ಮೊದಲ ಭಾಗ್ಯ : ಉದ್ಘಾಟನಾ ಕಾರ್ಯಕ್ರಮದ ವೇದಿಕೆಯಲ್ಲಿ ನಾನಿದ್ದೆ. ಅದಾದ ೪೩ ವರ್ಷಗಳ ನಂತರ, ಆ ಮಹಾಕವಿಯ ಕಾಯಕ ಭೂಮಿಯಾಗಿದ್ದ ಈ ಊರಿನಲ್ಲಿ – ಮೈಸೂರಿನಲ್ಲಿ – ಸಮ್ಮೇಳನದ ೮೩ನೆಯ ಅಧ್ಯಕ್ಷನಾಗಿ– ನಿಮ್ಮೆದುರು ನಿಂತಿದ್ದೇನೆ. ನಮ್ಮೊಳಗೇ ಇಂಗಿ ಹೋಗಿರುವ ಆ ಮಹಾ ಚೇತನಕ್ಕೆ ಇಲ್ಲಿಂದಲೇ ಶರಣು.

೧೯೫೭ರ ಕುವೆಂಪು ನೇತೃತ್ವದ ಧಾರವಾಡದ ೩೯ನೆಯ ಸಮ್ಮೇಳನ : 'ಏಕೀಕೃತ, ಅಖಂಡ ಕರ್ನಾಟಕದ ಸಾಹಿತ್ಯ ಪರಿಷತ್ತಿನ ಪ್ರಪ್ರಥಮ ವಾರ್ಷಿಕ ಸಮ್ಮೇಳನೋತ್ಸವ' (ಇದು ಕುವೆಂಪು ಬಣ್ಣಿಸಿದ ಪರಿ).

*

[ಈಗ ಒಂದು ಸಣ್ಣ ಪ್ರಮಾಣದ ಸ್ವ - ಪ್ರವರ :

**ಹುಟ್ಟೂರು** : ಹತ್ತೀಮತ್ತೂರು (ತಾ।ಸವಣೂರು, ಜಿ।ಹಾವೇರಿ)

**ದಿನ** : ೧೮ ಜೂನ ೧೯೩೯

**ಮನೆತನ** : ಮಧ್ಯಮ ರೈತಾಪಿ ಕುಟುಂಬ -ಲಿಂಗಾಯತರ ಪೈಕಿ ಜಂಗಮ-ಗೌಡರು.

**ಅಪ್ಪ** : ಬಿ.ಎಚ್.ಪಾಟೀಲ, (ಹಳೇ ಕಾಂಗ್ರೆಸಿಗ;ಸಾಮಾಜಿಕ ಕಾರ್ಯಕರ್ತ; ಇಂಗ್ಲಿಷ್ ಮಾಸ್ತರು; ವಿಚಾರವಾದಿ; ಸ್ವಾತಂತ್ರ್ಯ / ಏಕೀಕರಣ/ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗಿ)

**ಅವ್ವ** : ಮುರಿಗೆವ್ವ, (ಕಲಿತವಳು; ಮಧುರಕಂಠ; ಊರಿಗೆಲ್ಲ ಅವ್ವ/ ಅಕ್ಕ)

**ಶಿಕ್ಷಣ** : ಕನ್ನಡ ಸಾಲಿ (ಹತ್ತೀಮತ್ತೂರು); ಹೈಸ್ಕೂಲು (ಹಾವೇರಿ)
ಬಿ.ಎ. ಎಂ.ಎ. (ಧಾರವಾಡ ; ಕರ್ನಾಟಕ ಕಾಲೇಜು/ ಯುನಿವರ್ಸಿಟಿ : ಇಂಗ್ಲಿಷ್ ಸಾಹಿತ್ಯ)
ಇಂಗ್ಲಿಷ್ ಡಿಪ್ಲೋಮ (ಹೈದ್ರಾಬಾದ್-ಸಿಐಇ)
ಎಂ.ಎ. (ಲೀಡ್ಸ್ ಯುನಿವರ್ಸಿಟಿ-ಇಂಗ್ಲಂಡ್ : ಭಾಷಾಶಾಸ್ತ್ರ)
ಹಿಂದಿ ವಿಶಾರದ (ದ.ಭಾ.ಹಿಂದಿ ಪ್ರಚಾರ ಸಭಾ)

**ನೌಕರಿ** : ಇಂಗ್ಲಿಷ್ ಪ್ರಾಧ್ಯಾಪಕರು (ಕರ್ನಾಟಕ ಕಾಲೇಜು/ಯುನಿವರ್ಸಿಟಿ)

> ಕನ್ನಡ ನುಡಿ ಚಿಂತನೆ ಕರ್ನಾಟಕದ ನಿರ್ದಿಷ್ಟ ಭೌಗೋಲಿಕ ಪ್ರದೇಶದಲ್ಲಿ ವಾಸಿಸುತ್ತಿರುವವರ ಬಾಳ್ವೆಯ ಪ್ರಶ್ನೆ ಮಾತ್ರವಲ್ಲ; ಕನ್ನಡ ಮಾತಾಡುವವರು ಎಲ್ಲೆಲ್ಲಿ ವಾಸಿಸುತ್ತಿರುವರೋ ಅವರೆಲ್ಲರೂ ಹಿಡಿ ನೆಮ್ಮದಿಯಿಂದ ಬದುಕುವಂಥ ವಾತಾವರಣ ಕಲ್ಪಿಸುವ ರಾಜಕೀಯ ಇಚ್ಛಾಶಕ್ತಿಯ ಚರ್ಚೆವರೆಗೂ ಇದರ ಅರ್ಥವನ್ನು ವಿಸ್ತರಿಸಿಕೊಳ್ಳಬೇಕಿದೆ.
>
> **-ಶಾಂತರಸ**



**ಸಾಹಿತ್ಯ** : ಕಾವ್ಯ-ನಾಟಕ-ಲಲಿತ ಪ್ರಬಂಧ- ವಿಮರ್ಶೆ - ಅಂಕಣ ಲೇಖನ ಮುಂ....

**ಆ ಈ ಜವಾಬ್ದಾರಿ** : ಕ.ಸಾ.ಪ. ಅಧ್ಯಕ್ಷ (೨೦೦೪-೦೮)
ಕ. ಅ. ಪ್ರಾಧಿಕಾರದ ಅಧ್ಯಕ್ಷ (೧೯೯೬-೯೯)
ಕರ್ನಾಟಕ ಸ್ವಾಭಿಮಾನಿ ವೇದಿಕೆಯ ಅಧ್ಯಕ್ಷ (೨೦೦೧ರಿಂದ)

**ಸಾಹಿತ್ಯೇತರ** : ಸಮಾಜವಾದಿ ಯುವಜನ ಸಭಾ (ಜಾತಿ ವಿನಾಶ ಆಂದೋಲನ) : 'ಒಕ್ಕೂಟ'; ನವನಿರ್ಮಾಣ ವೇದಿಕೆ (ಜೇಪಿ ಚಳುವಳಿ-ಎಮರ್ಜನ್ಸಿ-ಜೇಲುವಾಸ): ಗೋಕಾಕ ಚಳುವಳಿ ; ಮಂಡಲ್ ಚಳುವಳಿ; ಬಂಡಾಯ ಸಾಹಿತ್ಯ ಚಳುವಳಿ; ಶಿಕ್ಷಣ ಮಾಧ್ಯಮ ಆಂದೋಲನ : ದಕ್ಷಿಣಾಯನ....ಒಂದೇ ಎರಡೇ?

**'ಸಂಕ್ರಮಣ' ಸಾಹಿತ್ಯ ಪತ್ರಿಕೆ** : ಪ್ರಾರಂಭ : ೧೯೬೪ (ಮೈಸೂರಿನ ತೇಜಸ್ವಿ-ಶ್ರೀರಾಮ ಅವರ 'ಲಹರಿ'ಯ ಪ್ರೇರಣೆ)
: ೧೯೬೪ -೭೫ : ಸಂಪಾದಕರು : ಚಂಪಾ. ಪಟ್ಟಣ ಶೆಟ್ಟಿ , ಗಿರಡ್ಡಿ
: ೧೯೭೫ ರ ನಂತರ ಈ ವರೆಗೆ : ಸಂಪಾದಕರು : ಚಂಪಾ

●

ನನ್ನ ಅಕ್ಷರದ ಬೀಜಕ್ಕೆ ಭೂಮಿಯಾದವರು- ಹಾವೇರಿ ಹೈಸ್ಕೂಲಿನ ಗುರುಗಳಾದ ಗಂಗಾಧರ ಸವದತ್ತಿ, ಪಿ.ಜಿ. ಬಿದರಿಮಠ, ಎಂ.ಬಿ.ಹಿರೇಮಠ. ಆರ್.ವಿ. ಕುಲಕರ್ಣಿ (ರಾಕು), ಹುಚ್ಚರಾವ ಬೆಂಗೇರಿ. ಮುಂದೆ ಕರ್ನಾಟಕ ಕಾಲೇಜಿನಲ್ಲಿ ಗುರು ವಿ.ಕೃ. ಗೋಕಾಕರು. ಅವರು 'ಕಮಲ ಮಂಡಲ' ಕಟ್ಟಿ ನನ್ನ ವಾರಿಗೆಯ ಕವಿ-ಜೇನ್ನೊಣಗಳಿಂದ 'ಭೃಂಗನಾದ' ಹೊರಡಿಸಿದವರು. ನನ್ನ ಇಂಗ್ಲಿಷ್ ಕವನಗಳಿಗೆ ಪ್ರೋತ್ಸಾಹ ಪ್ರೊ. ಅರ್ಮಾಂದೋ ಮೆನೆಜಿಸ್ ಅವರಿಂದ.

ನಾವು ಬರೆಯಲು ಸುರುಮಾಡಿದಾಗ 'ನವ್ಯ'ದ ಮಟ ಮಟ ಮದ್ಯಾಣ. ನವೋದಯ -ಪ್ರಗತಿಶೀಲ ಮಂಕಾಗಿದ್ದವು. ಉತ್ತರದಿಂದ ಗೋಕಾಕರ ಪಾಂಚಜನ್ಯ; ದಕ್ಷಿಣದಿಂದ ಅಡಿಗರ ಶಂಖನಾದ. ಅದು ಅರವತ್ತರ ದಶಕ. ಅದು ಮುಗಿಯುತ್ತಿದ್ದಂತೆ

ಸೀನರಿ ಬದಲಾಗಿತ್ತು. ಎಪ್ಪತ್ತರ ದಶಕದಲ್ಲಿ ನಾಡಿನ ತುಂಬ ಪರಿವರ್ತನೆಯ ಕಂಪನಗಳು.

ನನ್ನ ಬದುಕಿನಲ್ಲಿ ಗೋಕಾಕರದು ದೊಡ್ಡ ಪಾತ್ರ- ಅನೇಕ ನೆಲೆಗಳಲ್ಲಿ. ಅವರು ನನ್ನ 'ಕಾವ್ಯ ಗುರು' ; ಆದರೂ ಅವರ ಕಾವ್ಯ ಮಾರ್ಗ ನನ್ನದಾಗಲಿಲ್ಲ, ಮೊದಲು ಚುಂಬಕದಂತೆ ಸೆಳೆದಿದ್ದ ಅಡಿಗರ ಕಾವ್ಯ ಮಾರ್ಗವೂ ನನ್ನದಾಗಲಿಲ್ಲ, ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾಗಿದ್ದರಿಂದ ಹಳಗನ್ನಡ - ನಡುಗನ್ನಡ - ವಚನ ಸಾಹಿತ್ಯ-ತತ್ವ ಪದಗಳು. ಇದಾವುದರ ನೇರ ಸಂಪರ್ಕ ಸಾಧ್ಯವಾಗಲೇ ಇಲ್ಲ,

*ನನ್ನ ಹಾಡಿನ ಹಳ್ಳ ಎಲ್ಲಿ ಹೊರಳುವದೇನೊ-*
*ಗಚ್ಚಿನ ಗಟಾರವನು ಕಟ್ಟಬೇಡ........*

ಎಂದು ೧೯೬೦ ರಲ್ಲಿಯೇ ಬರೆದಿದ್ದೆ. ನಂತರ ಅದೇ ಲಯ, ಅದೇ ಗತಿ. ನನಗೆ ನಾನೇ ಲಕ್ಷ್ಮಣರೇಖೆ ಹಾಕಿಕೊಳ್ಳುವುದು; ಅದನ್ನೇ ಉಲ್ಲಂಘಿಸುವುದು. ಹೀಗಾಗಿ ನನ್ನ ಸಾಹಿತ್ಯದ ಮೇಲೆ ಯಾವ ಪ್ರಭಾವ, ಯಾರ ಪ್ರಭಾವ ಎಷ್ಟಾಗಿದೆ ಅಂತ ನನಗೇ ಗೊತ್ತಿಲ್ಲ. ವಿಮರ್ಶಕರು ಹೇಳಿದರೆ ಗೊತ್ತಾದೀತೇನೋ.

ಚಳುವಳಿಯ ಮನುಷ್ಯನೇ ಆಗಿದ್ದ ಅಪ್ಪನಿಂದಾಗಿ ಮನೆಯಲ್ಲಿ ಉದಾರವಾದಿ ಪರಿಸರ; ಮೊದಲಿನಿಂದಲೂ 'ಪ್ರಶ್ನೆ' ಕೇಳುವ ಚಾಳಿ; ಸ್ವಲ್ಪ ಜಗಳಗಂಟತನ; ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳ ಬಗ್ಗೆ ಕುತೂಹಲ - ಆಸಕ್ತಿ. ಇದೆಲ್ಲದರ ಪರಿಣಾಮ : 'ಅಕ್ಷರ ವನ್ನು ನಾನು ಒಲಿದಂತೆ ಬರೆಯುವೆ' -ಎಂಬ ಆತ್ಮವಿಶ್ವಾಸ ಬಂದಂದಿನಿಂದ 'ಅಕ್ಷರ' ಮತ್ತು 'ಕ್ರಿಯೆ' ಯ ನಡುವಿನ ಫರಕು ಕಡಿಮೆಯಾಗುತ್ತಲೇ ಬಂತು - ನನ್ನ ಪಾಲಿಗೆ.

> ಸಮಾಜದಲ್ಲಿ ಅಲ್ಲಿಯ ನುಡಿಯಾಡುಗರ ಕಲಿಕೆ. ದುಡಿಮೆ, ಬದುಕು, ಸಂಸ್ಕೃತಿ, ಕಲೆ, ಸಾಹಿತ್ಯ, ಟೆಕ್ನಾಲಜಿ ಹೀಗೆ ಎಲ್ಲ ಕ್ಷೇತ್ರಗಳ ಎಲ್ಲ ಅಗತ್ಯವನ್ನೂ ಪೂರೈಸುವ ಭಾಷೆಯಾಗಿ ಕನ್ನಡ ಕಾಣಿಸಿಕೊಳ್ಳಬೇಕು.
>
> **- ವಸಂತ ಶೆಟ್ಟಿ**



## ಕವಿತೆ ಅಂದರೆ

ಕವಿತೆ ಬರೆಯುವುದು ಅನ್ನುತ್ತಾರೆ.
ಕವಿತೆ ಕಟ್ಟುವುದು ಅನ್ನುತ್ತಾರೆ.
ಈ ಬರೆಯುವ ಕೊರೆಯುವ ಕಟ್ಟುವ
ತೌಡು ಕುಟ್ಟುವ ವ್ಯಾಖ್ಯೆಗಳು
ನನಗಷ್ಟು ಅರ್ಥವಾಗುವುದಿಲ್ಲ

ಕವಿತೆ ಅಂದರೆ ಒಂದರ್ಥದಲ್ಲಿ ಬರಿ
ಮಾತು, ಶಬ್ದ. ಬರೋಬರಿ.
ತಿಂದದ್ದು ಹೂಸಾಗಿ ಹೇಲಾಗಿ ಉಚ್ಚಿಯಾಗಿ
ಉಳಿದದ್ದು ರಕ್ತವಾಗುತ್ತದೆ. ವೀರ್ಯವಾಗುತ್ತದೆ.
ಮೈಗೆ ಬಣ್ಣ ಬರುತ್ತದೆ.
ಕಣ್ಣಲ್ಲಿ ಮಿಂಚು ಮಿನುಗುತ್ತದೆ.
ಹಾಗೇ ಪಟ್ಟ ಪಾಡೆಲ್ಲ ಅರ್ಕವಾದಾಗ
ಮಾತಾಗಿ ಶಬ್ದವಾಗಿ
ಕವಿತೆಯಾಗುತ್ತದೆ.

ಈ ಮಾತಿಗೆ ಇನ್ನೂ ಒಂದು ಮಾತಿದೆ.

ಈ ಮಾತಿನ ಶೂನ್ಯದ ಬೆನ್ನಿಗೆ
ಕ್ರಿಯೆಯ ಅಂಕಿ ಇರದಿದ್ದರೆ,
ಈ ಶಬ್ದದ ಅಂಗಾರದ ಮುನ್ನ
ಆಚಾರದ ಬೆಂಕಿ ಇರದಿದ್ದರೆ
ಈ ಮಾತು, ಈ ಶಬ್ದ
ಬರಿ ಸೊನ್ನೆ, ಬರಿ ಬೂದಿ. ಅಷ್ಟೆ

ಹೀಗಾಗಿ- ನನ್ನ ಬದುಕೇ ಒಂದು ಚಳುವಳಿಯ ಸರಪಳಿ ಆಯಿತೇನೋ. ಇಲ್ಲಿಗೆ ನನ್ನ ಪ್ರವರ ಮುಗಿಯಿತು.]

●

೧೯೫೭ರಲ್ಲಿ ಧಾರವಾಡದಲ್ಲಿ ನಡೆದ ಕುವೆಂಪು-ಅಧ್ಯಕ್ಷತೆಯ ಸಮ್ಮೇಳನದ ಬಗ್ಗೆ ಹೇಳಿದೆ. ಅಂದು ನಾನು ಸಭಾಂಗಣದ ಅಂಚಿನಲ್ಲಿ ನಿಂತಿದ್ದ ಒಬ್ಬ ಕಾಲೇಜು ವಿದ್ಯಾರ್ಥಿ ........ಮುಂದೆ ನಾಲ್ಕೇ ವರ್ಷಗಳಲ್ಲಿ-ಅಂದರೆ ೧೯೬೧ರಲ್ಲಿ ಗದಗ- ಬೆಟಗೇರಿಯಲ್ಲಿ ಜರುಗಿದ ೪೩ನೆಯ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಅಧಿಕೃತವಾಗಿ ಪಾಲು ಗೊಂಡಿದ್ದೆ (ಡಿಸೆಂಬರ್೨೭-೨೮-೨೯). ಶ್ರೀ ಕೆ.ಜಿ. ಕುಂದಣಗಾರರು ಸಮ್ಮೇಳನದ ಅಧ್ಯಕ್ಷರು; 'ಕವಿಗಾಳಿ ಸವಿಗಾಳಿ' ತೀಡುವ ಧಾರವಾಡದ ಶ್ರೀ ಚೆನ್ನವೀರ ಕಣವಿ ಯವರು ಕವಿಗೋಷ್ಠಿಯ ಅಧ್ಯಕ್ಷರು. (ಆಗ ನಾ ಪಡೆದ ಬ್ಯಾಜ್-ಎದೆಪದಕ- ಇಂದಿಗೂ ನನ್ನ ಅಮೂಲ್ಯ ಸ್ಮರಣಿಕೆಯಾಗಿದೆ.)

ಮುಂದೆ ಈ ಮಹಾಸಂಸ್ಥೆಯ ಅಧಿಕೃತ ಸದಸ್ಯನೂ ಆಗಿ ಅಖಂಡ ಹದಿನೆಂಟು ವರ್ಷ ಅನೇಕ ನೆಲೆಗಳಲ್ಲಿ ಅದರ ಭಾಗವಾದೆ. ನಂತರದ ಹತ್ತು ವರ್ಷಗಳ ಕಾಲ ಈ ನಂಟಿ ನಲ್ಲಿ ಏನೋ ಬಿರುಕು. (೧೯೭೯-೮೯). ಅದರ ಬಗ್ಗೆ ನಾನು ಮಾತಾಡಲೇಬೇಕು; ಏಕೆಂದರೆ ಈ 'ಬಿರುಕು' ಕೂಡ ಸಮಕಾಲೀನ ವಿದ್ಯಮಾನಗಳ ಪರಿಣಾಮವೇ.

ನಾವೆಲ್ಲ ನವೋದಯ-ಪ್ರಗತಿಶೀಲ-ನವ್ಯ ಎಂದು ನಮ್ಮ ಸಾಹಿತ್ಯದ ಕಾಲಘಟ್ಟಗಳನ್ನು ಗುರುತಿಸುತ್ತೇವೆ. ೧೯೧೫ರಲ್ಲಿ ನಮ್ಮ ಸಾಹಿತ್ಯ ಚೇತನಗಳೇ ಕಟ್ಟಿದ ಒಂದು ಜನತಾ ಸಂಸ್ಥೆ: ಕನ್ನಡ ಸಾಹಿತ್ಯ ಪರಿಷತ್ತು. ಆಗಿನ ಮೈಸೂರು ಅರಸರ ಸಕಲ ಬಗೆಯ ಪ್ರೋತ್ಸಾಹವೂ ಇತ್ತು. ನಮ್ಮ ನವೋದಯ ಪರ್ವದ ಎಲ್ಲ ಸ್ತರದ ಸಾಹಿತಿಗಳು ಪರಿಷತ್ತಿನೊಂದಿಗೆ ಹೊಂದಿದ ಸಾಂಗತ್ಯ ಅಪರೂಪದ್ದು. ಅವರಲ್ಲಿ ಅನೇಕ ಹಿರಿಯರು ಪರಿಷತ್ತಿನ ಅಧ್ಯಕ್ಷರಾಗಿ, ಸಮ್ಮೇಳನಗಳ ಅಧ್ಯಕ್ಷರಾಗಿ ಒಂದು ಸಾಂಸ್ಕೃತಿಕ ಪರಂಪರೆ ನಿರ್ಮಿಸಿದ್ದಾರೆ. ಹಾಗೆಯೇ ಸಮಕಾಲೀನ ವಿದ್ಯಮಾನಗಳಿಗೆ- ಉದಾ: ಸ್ವಾತಂತ್ರ್ಯ ಆಂದೋಲನ; ಏಕೀಕರಣ ಚಳುವಳಿ- ಪರಿಷತ್ತು ಸ್ಪಂದಿಸಿದ ಬಗೆಯೂ ಅನನ್ಯ. ಸಮಷ್ಟಿಯೊಂದಿಗಿನ ಇಂಥ ಅನುಸಂಧಾನದಿಂದಲೇ ಸಂಸ್ಥೆಗಳು ಬೆಳೆಯಲು ಸಾಧ್ಯ.

> ಸಾಹಿತ್ಯ ಕಲೆಗಳ ಸೃಷ್ಟಿಯ ಜೊತೆಯಲ್ಲೇ ವಿಜ್ಞಾನದ ಸಮಕಾಲೀನ ಪರಿಜ್ಞಾನ ಸಹ ನಮ್ಮ ನಾಡಿನ ಶಿಕ್ಷಣದಲ್ಲಿ ಪ್ರಥಮ ಆದ್ಯತೆಯನ್ನು ಪಡೆಯಬೇಕು. ಇಂದು ವಿಜ್ಞಾನ ನಿರ್ಲಕ್ಷ್ಯ ಅಕ್ಷಮ್ಯವಷ್ಟೇ ಅಲ್ಲ, ಅಪಾರ ನಷ್ಟಕರವೂ ಹೌದು.
>
> **– ನಿಸಾರ್ ಅಹಮದ**



'ನವೋದಯ'ದ ಅಂತ್ಯದ ಹೊತ್ತಿಗೆ ಕಾಣಿಸಿಕೊಂಡದ್ದು 'ಪ್ರಗತಿಶೀಲ': ನಂತರ ಬಂದದ್ದು 'ನವ್ಯ'- (೧೯೫೦ ರ ಸುರುವಾತಿಗೆ). ಕಸಾಪದೊಂದಿಗೆ 'ಪ್ರಗತಿಶೀಲ' ರ ಒಡನಾಟ ಎಷ್ಟಿತ್ತೋ ತಿಳಿಯದು. ಆದರೆ 'ನವ್ಯ'ವು ಹರೆಯಕ್ಕೆ ಬಂದ ಅವಧಿಯಲ್ಲಿ ಯಾಕೋ ಪರಿಷತ್ತು ಮತ್ತು ಸಾಹಿತ್ಯಿಕ ವಿದ್ಯಮಾನಗಳ ನಡುವೆ ಒಂದು ಬಗೆಯ ಬಿರುಕು. ಅರವತ್ತು-ಎಪ್ಪತ್ತರ ದಶಕಗಳ ಬೆಳವಣಿಗೆಗಳೂ ಈ ಸಂಸ್ಥೆಯನ್ನು ತಟ್ಟಿದಂತೆ ಕಾಣುವುದಿಲ್ಲ

ಅರವತ್ತರ ದಶಕದ ಮಧ್ಯದಲ್ಲಿ ಚಿಗುರಿದ 'ದಲಿತ', 'ಬಂಡಾಯ' ಗಳು ಮುಂದಿನ ದಶಕದಲ್ಲಿ ಗಟ್ಟಿ ಸ್ವರೂಪವನ್ನೇ ಪಡೆದವು. ನನ್ನಂಥವರು 'ನವ್ಯದ' ಸೀಮೆ ಉಲ್ಲಂಘಿಸಿ 'ಬಂಡಾಯ' ವಲಯ ಪ್ರವೇಶಿಸಿದ್ದೆವು....ಆಗ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಶ್ರೀ ಹಂ.ಪ. ನಾಗರಾಜಯ್ಯ. ೧೯೭೯ರಲ್ಲಿ ಧರ್ಮಸ್ಥಳದಲ್ಲಿ ನಡೆಯಲಿದ್ದ ಸಾಹಿತ್ಯ ಸಮ್ಮೇಳನಕ್ಕೆ ನಿಯೋಜಿತ ಅಧ್ಯಕ್ಷರು ಖ್ಯಾತ ನವ್ಯಕವಿ ಶ್ರೀ ಗೋಪಾಲಕೃಷ್ಣ ಅಡಿಗರು. ದಲಿತ-ಬಂಡಾಯದ ವಕ್ತಾರರಂತಿದ್ದ ಗೆಳೆಯ ಚೆನ್ನಣ್ಣ ವಾಲೀಕಾರರು, ''ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಕುರಿತ ಒಂದು ಸಾಹಿತ್ಯಗೋಷ್ಠಿ ಏರ್ಪಡಿಸಬೇಕು''- ಎಂಬ ಪ್ರಸ್ತಾವನೆ ಇಟ್ಟರು ಪತ್ರಿಕೆಗಳ ಮೂಲಕ. ಈ ಮನವಿಯನ್ನು ಕಸಾಪ ಅಧ್ಯಕ್ಷರು ಸ್ವಲ್ಪ ಉಡಾಫೆಯಿಂದಲೇ ತಿರಸ್ಕರಿಸಿದರು : 'ನಾವು ಸಾಹಿತ್ಯದಲ್ಲಿ ದಲಿತ-ಕಲಿತ-ಬಲಿತ ಹೀಗೆ ವಿಂಗಡಣೆ ಮಾಡಲು ಸಾಧ್ಯವಿಲ್ಲ'

ಮುಂದಿನದು ಇತಿಹಾಸ.

ನಾಡಿನುದ್ದಗಲದ ಪ್ರಗತಿಪರ ಬರಹಗಾರರೆಲ್ಲ ಸೇರಿ ಒಕ್ಕೊರಲಿನಿಂದ ಮಹಾನ್ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿಗೆ 'ಬಹಿಷ್ಕಾರ' ಹಾಕಿದೆವು. ಅಲ್ಲದೆ ಅತ್ತ ಧರ್ಮಸ್ಥಳದಲ್ಲಿ ೧೯೭೯ರ ಮಾರ್ಚ ೯-೧೦-೧೧ರಂದು ಅಡಿಗರ ಅಧ್ಯಕ್ಷತೆಯಲ್ಲಿ ೫೧ನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನ ನಡೆದ ಅವಧಿಯಲ್ಲೇ ಇತ್ತ ರಾಜಧಾನಿ ಬೆಂಗಳೂರಿನ ದೇವಾಂಗಸಂಘದ ಛತ್ರದಲ್ಲಿ ನಾವೆಲ್ಲ ಪ್ರಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಂಡೆವು.........ಇದೂ ಇತಿಹಾಸವೇ.

ಇತಿಹಾಸ ಸದಾ ಚಲನಶೀಲ.

ಮುಂದೆ ಹತ್ತೇ ವರ್ಷಗಳಲ್ಲಿ ದೃಶ್ಯ ಬದಲಾಗಿತ್ತು. ಹಂಪನಾ ಮತ್ತು ಜ್ವಾಲನಯ್ಯ ಅವರ ನಂತರ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಬಂದ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ

ನವರು ತಾವೇ ಮುಂದಾಗಿ 'ಬಂಡಾಯ-ಸಾಹಿತ್ಯದ ದಶಮಾನೋತ್ಸವ'ವನ್ನು ಪರಿಷತ್ತಿನ ಪರವಾಗಿಯೇ ನಡೆಸಿಕೊಟ್ಟರು.

ಪರಿಷತ್ತು ಹತ್ತು ವರ್ಷಗಳ ಕಾಲ 'ಪ್ರತಿಗಾಮಿ' ವಿಚಾರಧಾರೆಯ ವಾಹಕವಾಗಿತ್ತೆಂದೂ ಪ್ರತಿಗಾಮಿ ಸಾಹಿತಿಗಳ ನೆಲೆವೀಡಾಗಿತ್ತೆಂದೂ ಇದರ ಅರ್ಥವಲ್ಲ. ಈ ಅವಧಿಯಲ್ಲಿ ಸಮ್ಮೇಳನಾಧ್ಯಕ್ಷರಾದವರು : ಸರ್ವಶ್ರೀ ಬಸವರಾಜ ಕಟ್ಟೀಮನಿ, ಪು.ತಿ. ನರಸಿಂಹಾಚಾರ್, ಶಂ.ಬಾ. ಜೋಶಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎ.ಎನ್. ಮೂರ್ತಿರಾವ್, ಹಾ.ಮಾ. ನಾಯಕ, ಸಿದ್ಧಯ್ಯ ಪುರಾಣಿಕ, ಆರ್. ಸಿ. ಹಿರೇಮಠ ಮುಂತಾದವರು. ಇವರು ಯಾರೂ 'ಪ್ರತಿಗಾಮಿ' ಸಾಹಿತಿಗಳಲ್ಲ.

ತಾತ್ಪರ್ಯ : ೧೯೭೯ರಲ್ಲಿ ಹಳಿ ತಪ್ಪಿದಂತೆ ತೋರಿದ್ದ ಪರಿಷತ್ತು ಮತ್ತೆ ಹಳಿಯ ಮೇಲೆ ಬಂದಿತ್ತು. ಈ ಪ್ರಜಾಸತ್ತಾತ್ಮಕ ಸಂಸ್ಥೆ ಮತ್ತೆ ತನ್ನ ಮೂಲ ಲಯಕ್ಕೆ ಮರಳಿದ ಸಮಾಧಾನ ದಲಿತ-ಬಂಡಾಯದ ಬರಹಗಾರರಿಗೆ ಉಂಟಾಗಿ ಮತ್ತೆ ನಾವೆಲ್ಲ ಮಾತೃಸಂಸ್ಥೆಗೆ ಮರಳುವಂತಾಯಿತು.

*

ಕನ್ನಡ ಸಾಹಿತ್ಯದ ಜಾಯಮಾನವೇ ಇದು. ಎರಡು ಸಾವಿರ ವರ್ಷಗಳುದ್ದಕ್ಕೂ ಉಳಿದುಕೊಂಡು ಬಂದದ್ದು 'ಮನುಷ್ಯ ಜಾತಿ, ತಾನೊಂದೆ ವಲಂ' ಎಂಬ ಲೋಕದೃಷ್ಟಿಗೆ ದೃಷ್ಟಾಂತವಾಗಿರುವ ಕೃತಿಗಳೇ. ಪ್ರತಿಗಾಮಿ-ಜೀವ ವಿರೋಧಿ-ಮೂಲಭೂತವಾದಿ ದನಿಗಳು ಅಲ್ಲಲ್ಲಿ ಕೇಳಿಸಿದರೂ, ಅವು ಒಟ್ಟಾಗಿ ಒಂದು 'ಧಾರೆ' ಅಂತ ಆಗಲೇ ಇಲ್ಲ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ. ಇವತ್ತಿನ ದೃಶ್ಯವೂ ಅಂಥದೇ. ಹಿರಿಯ ಸಾಹಿತಿಶ್ರೀ ಚದುರಂಗರ ಮಾತುಗಳಿವು :

> *ಈ ಸಾಹಿತ್ಯ ಚಳುವಳಿಗಳಲ್ಲೆಲ್ಲ ನಾನು ಕಂಡಂತೆ ಮುಖ್ಯವಾಗಿ ಕನ್ನಡದ ಮನಸ್ಸು ಮೂಲತಃ ಪ್ರಗತಿಪರವಾದದ್ದು, ಮಾನವೀಯವಾದದ್ದು. ಈ ಕನ್ನಡ ಸಾಹಿತ್ಯ ಚಳುವಳಿಗಳು ಒಂದೊಂದೂ ಆಯಾ ಕಾಲಮಾನದ ವಾಸ್ತವಕ್ಕೆ ಪ್ರತಿಕ್ರಿಯೆ, ಸಂವೇದನೆಗಾಗಿ ಬಂದಂಥವು. ಇಂಥ ಪ್ರಯೋಗಗಳು ಕನ್ನಡ ಸಾಹಿತ್ಯ ನಿಂತ ನೀರಲ್ಲವೆಂಬುದನ್ನೂ, ಆದರ ಪ್ರಯೋಗಗಳು ಕನ್ನಡ ಸಾಹಿತ್ಯದ ನಿರಂತರ ಚಲನಶೀಲತೆಯನ್ನೂ ನಿಚ್ಚಳವಾಗಿ ಮನಗಾಣಿಸುತ್ತವೆ. ಇದರಿಂದ ಕನ್ನಡಕ್ಕೆ ಬೆರಗು ಹುಟ್ಟಿಸುವಂಥ ವೈವಿಧ್ಯತೆ ಪ್ರಾಪ್ತವಾಗಿದೆ.*

**(ಚದುರಂಗ : ಸಮ್ಮೇಳನ ೬೩ : ೧೯೯೪)**



ದಲಿತ-ಬಂಡಾಯದ ಪರ್ವ ಸುರುವಾದಾಗಿನಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಗಳ ವಿನ್ಯಾಸಗಳಾಗಲಿ, ಸಮ್ಮೇಳನಗಳ ಸ್ವರೂಪಗಳಾಗಲಿ, ದಲಿತ - ಬಂಡಾಯದ ದಟ್ಟ ಪ್ರಭಾವಕ್ಕೆ ಒಳಗಾಗುತ್ತಿರುವುದು ಸ್ಪಷ್ಟ. ಕಳೆದ ಹತ್ತು ವರ್ಷಗಳಲ್ಲಿ ಸಮ್ಮೇಳನಾಧ್ಯಕ್ಷರಾದವರಲ್ಲಿ ಶಾಂತರಸ-ನಿಸಾರ್-ಎಲ್. ಬಸವರಾಜು-ಗೀತಾ ನಾಗಭೂಷಣ - ಕೋಚೆ - ನಾ. ಡಿಸೋಜ- ಸಿದ್ಧಲಿಂಗಯ್ಯ- ಬರಗೂರು ಇವರೆಲ್ಲ ಇದೇ ಪ್ರಭಾವಳಿಗೆ ಸೇರಿದವರು......ಇವರೆಲ್ಲರ ಮುಂದುವರೆದ (ಪರಿಷ್ಕೃತ) ಆವೃತ್ತಿಯಾಗಿ ನಾನು ನಿಮ್ಮೆದುರು ನಿಂತಿದ್ದೇನೆ.

*

ಇಂದು ಅಖಂಡ ಕರ್ನಾಟಕದ ಏಕೈಕ ಪ್ರಾತಿನಿಧಿಕ ಸಂಸ್ಥೆ ಎಂಬ ಹೆಗ್ಗಳಿಕೆ ಕನ್ನಡ ಸಾಹಿತ್ಯ ಪರಿಷತ್ತಿನದು. ಇದಕ್ಕೆ ಕಾರಣ : ಅದರ ಆಂತರಿಕ ಸಂರಚನೆಯಲ್ಲಿಯೇ ಅಡಕವಾಗಿರುವ ವಿಕಸನಶೀಲತೆ. ಈ ಪ್ರಕ್ರಿಯೆಯನ್ನು ಮೂರು ನೆಲೆಗಳಲ್ಲಿ ಕಾಣಬಹುದು :

**(ಅ)** **ಭೌಗೋಳಿಕ :** ಮೊದಮೊದಲು ಹಳೇ ಮೈಸೂರಿಗೆ ಮಿತಿಗೊಂಡಂತಿದ್ದ ಕಸಾಪ ಇಂದು ನಾಡಿನ ಎಲ್ಲ ಜಿಲ್ಲೆ- ತಾಲ್ಲೂಕುಗಳಲ್ಲಿ, ಗಡಿ ನಾಡುಗಳಲ್ಲಿ, ನೆರೆಯ ಹೊರರಾಜ್ಯಗಳಲ್ಲಿ ಘಟಕಗಳನ್ನು ಹೊಂದಿದೆ.

**(ಬ)** **ಸಾಮಾಜಿಕ :** ಪೂರ್ವಾರ್ಧದಲ್ಲಿ ಮೇಲ್‌ಜಾತಿ ಮತ್ತು ವರ್ಗಗಳಿಗೆ ಸೀಮಿತಗೊಂಡಿದ್ದ ಕಸಾಪ ಇಂದು ಕನ್ನಡ ಭಾಷಿಕ ಸಮುದಾಯದ ಎಲ್ಲ ಸ್ತರಗಳ ಸದಸ್ಯರನ್ನು ಒಳಗು ಮಾಡಿಕೊಳ್ಳುತ್ತಿದೆ.

**(ಕ)** **ಸಾಂಸ್ಕೃತಿಕ :** 'ಸಾಹಿತ್ಯ' ವನ್ನು ಕೇಂದ್ರದಲ್ಲಿ ಇಟ್ಟುಕೊಂಡೇ ಪರಿಷತ್ತು ಇಂದು ಕನ್ನಡ ಸಮಷ್ಟಿ ಬದುಕಿನ ಎಲ್ಲ- (ಆರ್ಥಿಕ, ಶೈಕ್ಷಣಿಕ, ಭಾಷಿಕ, ಧಾರ್ಮಿಕ, ರಾಜಕೀಯ ಇತ್ಯಾದಿ)- ಆಯಾಮಗಳನ್ನು ಸ್ಪರ್ಶಿಸುತ್ತಿದೆ.

(ಸಮ್ಮೇಳನಗಳ 'ಗೋಷ್ಠಿ'ಗಳ ಸ್ವರೂಪದಿಂದ ಇದು ಸ್ಪಷ್ಟ)

●

ವ್ಯಕ್ತಿಗಳಿಗೆ ಮಿತಿ ಇರುವಂತೆ ಸಂಸ್ಥೆಗಳಿಗೂ ಮಿತಿ ಇರುತ್ತವೆ. 'ಏನೂ ಮಾಡಲೂ ಸಾಧ್ಯವಿಲ್ಲ; ಮಾಡಲಾರೆ' ಎಂಬ ಮನೋಭಾವ ಉಳ್ಳವರಿಗೆ ಈ ಮಿತಿಗಳು 'ಆಸರೆ'

ಯಾಗುತ್ತವೆ. ಆದರೆ 'ಏನಾದರೂ ಮಾಡಬೇಕು, ಮಾಡುವೆ'- ಎಂಬ ಛಲವಿದ್ದವರಿಗೆ 'ಮಿತಿ'ಗಳು ಸವಾಲಾಗುತ್ತದೆ. **ಪರಿಷತ್ತು**-ಅನೇಕ ಸಾಧ್ಯತೆಗಳನ್ನು ಒಡಲಲ್ಲಿ ಇಟ್ಟುಕೊಂಡಿರುವ ಮಹಾಸಂಸ್ಥೆ. ಅದರ ಮೂಲಸತ್ವ ಹಾಗೂ ಸ್ವರೂಪ ಪ್ರಜಾಸತ್ತಾತ್ಮಕ (ಡೆಮಕ್ರ್ಯಾಟಿಕ್) ಆಗಿರುವದರಿಂದ, ಪರಿಷತ್ತನ್ನು ಬೆಳೆಸುವುದು ಅಂದರೆ ನಮ್ಮ ಜನ ಶಕ್ತಿಯ ಕ್ರೋಡೀಕರಣ- ಎಂಬ ಅರಿವು ನಾಡಿನ ಪ್ರಜೆಗಳಲ್ಲಿ ಬರುವುದು ಮುಖ್ಯ.

ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಳ್ಳುವ ಸಾಹಿತ್ಯ ಸಮ್ಮೇಳನಗಳನ್ನು ಕೆಲವರು 'ಜಾತ್ರೆ' ಎಂದೋ, 'ಸಂತೆ' ಎಂದೋ ಕರೆದು ಮೂಗು ಮುರಿಯುವದು ಕೂಡ ಒಂದು ಮಾಮೂಲಿ ವಿದ್ಯಮಾನ. ವಿಚಿತ್ರವೆಂದರೆ, ಇಂಥವರು ಕೂಡ ಸಮ್ಮೇಳನದ ಆಮಂತ್ರಣ ಬಂದರೆ ತೆಪ್ಪಗೆ ಬಂದು, ಪ್ರಬಂಧವನ್ನೋ ಕವನವನ್ನೋ ಓದಿ, ನಿಯಮಾನುಸಾರ ಟಿ.ಎ.ಡಿ.ಎ. ಪಡೆಯುತ್ತಾರೆ.

●

'ಸಂತೆ', 'ಜಾತ್ರೆ' ಅಂತ ಮೂದಲಿಸುವವರೆಲ್ಲ ಸಂತೆಯನ್ನೇ ಸವಿಯದ, ಜಾತ್ರೆಯ ಸಂಭ್ರಮವನ್ನೇ ಅರಿಯದ ನಗರ ಪ್ರಜ್ಞೆಯ ಕೂಪಮಂಡೂಕಗಳು. ಹಳ್ಳಿಗಾಡಿನಿಂದ ಬಂದ ನನ್ನಂಥವರಿಗೆ : ಸಾಹಿತ್ಯ ಎಂಬುದು ಕೇವಲ ಕೆಲವು ಶಿಷ್ಟ ಪ್ರಜ್ಞೆಗಳ, ಪಾಂಡಿತ್ಯ ಪೂರ್ಣ ಒಣ ಅಭಿಪ್ರಾಯಗಳ, ಪಿಸುಮಾತಿನ ಪಕ್ಷಪಾತದ ವಿಮರ್ಶೆಗಳ, ಪರಸ್ಪರ ಬೆನ್ನು ಕೆರೆಯುವ ಕ್ಲಬ್ ಸದಸ್ಯರ ಬೌದ್ಧಿಕ ವ್ಯಾಯಾಮ ಎಂಬುದರಲ್ಲಿ ನಂಬಿಕೆ ಇಲ್ಲ, ಬದಲಾಗಿ ಅದು ನಮ್ಮ ಸಮುದಾಯದ ಅಭಿವ್ಯಕ್ತಿಯಾಗಿ, ಒಳ್ಳೆಯದರ ಕುರಿತು ಸಂಭ್ರಮಪಡುವ ಹಾಗೂ ಕೆಟ್ಟದರ ಬಗ್ಗೆ ಆರೋಗ್ಯಪೂರ್ಣ ಆತ್ಮ ವಿಮರ್ಶೆಗೆ ಅನುವು ಮಾಡಿಕೊಡುವ ಸಾಂಸ್ಕೃತಿಕ ವಿದ್ಯಮಾನ.

ನಮ್ಮ ಸಮುದಾಯ ಬದುಕಿನಲ್ಲಿ ಸಂತೆ ಮತ್ತು ಜಾತ್ರೆಗಳಿಗೆ ಇರುವ ಸಾಂಸ್ಕೃತಿಕ ಮಹತ್ವವನ್ನು ನಾವು ನೋಡಬೇಕು. ಹಲವು ದಿಕ್ಕುಗಳಿಂದ ಬರುವ ಸಾಹಿತ್ಯ

> ನಮ್ಮೆಲ್ಲರಿಗೆ, ಐದೂವರೆ ಕೋಟಿ ಕನ್ನಡಿಗರಿಗೆ, ಕನ್ನಡ ಸಂಸ್ಕೃತಿ ಎಂದರೆ ಪ್ರೀತಿ, ಹೆಮ್ಮೆ. ಈ ಸಂಸ್ಕೃತಿ ಒಂದು ಕಾಲದಲ್ಲಿ ಜೀವಂತ ಶಕ್ತಿಯಾಗಿದ್ದು, ಈಗ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿರುವ ವಸ್ತುವಲ್ಲ. ಅದು ನಮ್ಮ ಉಡುಗೆಯಂತೆ ಬೇಕಾದಾಗ ತೊಟ್ಟು ಬೇಡಾದಾಗ ತೆಗೆದಿಡುವ ವಸ್ತುವಲ್ಲ.
>
> **– ಎಲ್. ಎಸ್. ಶೇಷಗಿರಿ ರಾವ್**



ಪ್ರೇಮಿಗಳು, ಸಾಹಿತಿಗಳನ್ನು ಕಣ್ಣಾರೆ ಕಾಣಬೇಕೆಂಬ ತವಕ, ಸಂಗೀತ-ನೃತ್ಯ-ನಾಟಕ-ಜಾನಪದ ಕಲೆಗಳ ಪ್ರದರ್ಶನ, ಪುಸ್ತಕಗಳ ವ್ಯಾಪಕ ಮಾರಾಟ, ಸ್ನೇಹಿತರ ಭೆಟ್ಟಿ, ಹೊಸ ವಿಚಾರಗಳಿಗೆ ಕಿವಿಗೊಡುವ ಅವಕಾಶ, ಸಾಹಿತ್ಯದ ಸಮಕಾಲೀನ ಆಗುಹೋಗುಗಳ ಪರಿಚಯ-ಇವೆಲ್ಲ ಇಂಥ ಸಮ್ಮೇಳನಗಳಿಂದ ಆಗುವ ಪ್ರಯೋಜನಗಳು.

ಸಮ್ಮೇಳನಾಧ್ಯಕ್ಷರ ಭಾಷಣಗಳ ಸಮುಚ್ಚಯವೆಂದರೆ ಮೆಗಾ-ಧಾರಾವಾಹಿಯ ಎಪಿಸೋಡುಗಳಂತೆ ಅಂತ ಹೇಳಿದೆ. ಇಲ್ಲೂ ಒಂದು ವಿನ್ಯಾಸವಿದೆ : ಲಯವಿದೆ. ಏಕೀಕರಣ ಪೂರ್ವದ ಭಾಷಣಗಳಲ್ಲಿ ಆ ಕಾಲಮಾನದ ಕಾಳಜಿಗಳು: ಸ್ವಾತಂತ್ರ್ಯ ಚಳುವಳಿ; ನಾಡು ಒಂದಾಗಬೇಕೆಂಬ ಹಂಬಲ; ಕನ್ನಡಕ್ಕೊಂದು 'ಅಸ್ಮಿತೆ' ಕಟ್ಟಿಕೊಡುವ ಪ್ರಯತ್ನ. ಏಕೀಕರಣೋತ್ತರದಲ್ಲಿ ಕಾಣುವುದು ಕೂಡ ಸಮಕಾಲೀನ ಬಿಂಬಗಳೇ. ಒಂದಾದ ನಾಡು ಎದುರಿಸತೊಡಗಿದ ಸವಾಲುಗಳ ಸರಪಳಿಯೇ ಇದೆ. 'ಭಾರತ ಜನನಿಯ ತನುಜಾತೆ'ಯಾಗಿ, ಒಕ್ಕೂಟದ ಒಂದು ಭಾಗವಾಗಿ ಕರ್ನಾಟಕ ಎದುರುಗೊಂಡ ಬಿಕ್ಕಟ್ಟುಗಳ ಚರ್ಚೆಯೊಂದಿಗೆ, ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿಯೇ, 'ಪ್ರಭು' ಪಟ್ಟಕ್ಕೇರಿದವರು 'ಪ್ರಜೆ' ಗಳ ಮೇಲೆ ಮಾಡುವ ದಬ್ಬಾಳಿಕೆಗಳ ಚಿತ್ರಣವೂ ಇದೆ. ನಾವೀಗ ಆತಂಕದಿಂದ ಬಳಸುವ 'ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ, ವೈಚಾರಿಕತೆಯ ಕೊಲೆ' ಇತ್ಯಾದಿ ಪದಪುಂಜಗಳು ಸ್ವಾತಂತ್ರ್ಯೋತ್ತರ ಅವಧಿಯ ಪ್ರಭುತ್ವಗಳ ನಿಘಂಟಿನಲ್ಲಿ ಮೊದಲಿನಿಂದಲೂ ಇವೆ. ೧೯೭೦ರ ದಶಕದ ತುರ್ತು ಪರಿಸ್ಥಿತಿ ಇದೆಲ್ಲದರ ಒಂದು ಸ್ಥೂಲ ಬಿಂದು. ಇದೆಲ್ಲವನ್ನು ಎದುರಿಸುವ ಧೈರ್ಯ- ಸ್ಥೈರ್ಯ ಕೂಡ ನಮ್ಮ ಸಾಹಿತ್ಯ ಪರಂಪರೆಯ ಅಂತಃಶಕ್ತಿಯೇ.

ಶ್ರೀ ಶಿವರಾಮ ಕಾರಂತರ ಭಾಷಣದ- (ಮೈಸೂರು ಸಮ್ಮೇಳನ : ೧೯೫೫) ಈ ಮಾತು ಗಮನಿಸಿರಿ :

> *ನಮ್ಮ ದೇಶಕ್ಕೆ ಪ್ರಜಾಪ್ರಭುತ್ವ ಬರುವ ಮುಂಚೆಯೂ ನಾವು ಬರೆಯುತ್ತಿದ್ದೆವು; ಇಂದೂ ಬರೆಯುತ್ತಿದ್ದೇವೆ; ನಾಳೆಯೂ ಬರೆಯುವವರೇ. ಯಾರಿಗೆ ಯಾರೂ 'ಬರೆಯಬೇಡಿ' ಎನ್ನುವ ಅಧಿಕಾರವೂ ಇಲ್ಲ; ಬರೆಯುವುದು ನಮ್ಮ ಸ್ವಾತಂತ್ರ್ಯ; ನಮ್ಮ ಜನ್ಮಸಿದ್ಧ ಹಕ್ಕು ನಿಜ, ನಾವು ನಿರಂಕುಶರು. ನಿರಂಕುಶ ಮತಿಗಳು ; ನಿರಂಕುಶವಾದಿಗಳು.*
>
> *ಆದರೆ ಹೊರಗಿನ ಆಮಿಷ ನಮಗಿಲ್ಲದೆ ಹೋದರೂ, ಸದಸದ್ವಿವೇಕ ದೃಷ್ಟಿಯನ್ನು ನಾವಾಗಿ ಬೆಳೆಸಿಕೊಳ್ಳದೆ, ಅದರ ಅಂಕುಶಕ್ಕೆ ಒಳಗಾಗಿ ಸಾಹಿತ್ಯ*

*ನಿರ್ಮಾಣ ಮಾಡದೆ ಹೋದಲ್ಲಿ, ಅದರಿಂದ ಕಸದ ಬುಟ್ಟಿಗಳು ತುಂಬ ಬಹುದೇ ಹೊರತು ಸಾಹಿತ್ಯವೂ ತುಂಬುವುದಿಲ್ಲ, ಬದುಕೂ ತುಂಬುವುದಿಲ್ಲ, ಅಂತಹ ಬರವಣಿಗೆಗಳಿಂದ ಬಚ್ಚಲು ಬೆಳಗಬಹುದೇ ಹೊರತು, ಬದುಕು ಬೆಳಗಲಾರದು''.*

ಅಧ್ಯಕ್ಷೀಯ ಭಾಷಣಗಳ ಮತ್ತೊಂದು ಪಲಕು : ಕರ್ನಾಟಕದ ಒಟ್ಟು ಸಮಕಾಲೀನ ಸಾಹಿತ್ಯದ ಮತ್ತು ಸಮ್ಮೇಳನ ನಡೆಯುತ್ತಿರುವ ಸೀಮೆಯ ಸುತ್ತಣ ಸಾಹಿತ್ಯದ ವಿದ್ಯಮಾನಗಳ ಪರಿಚಯ ನೀಡುವುದು. (ಈ ಲೆಕ್ಕದ ಪ್ರಕಾರ ನಾನು ಮೈಸೂರು ಕೇಂದ್ರಿತ ಸೀಮೆಯ ವಿವರ ನೀಡಬೇಕು. ದಯವಿಟ್ಟು 'ಕನ್ನಡ ನುಡಿ' ಪತ್ರಿಕೆಯ ಆಗಸ್ಟ್-ಸೆಪ್ಟೆಂಬರ್ ೨೦೧೭ರ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಅಂಶಿ ಪ್ರಸನ್ನಕುಮಾರ ಅವರ ಲೇಖನ ಗಮನಿಸಿರಿ.)

ಈ ಮುಂಚೆ ರಾಯಚೂರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಶ್ರೀ ಬರಗೂರು ರಾಮಚಂದ್ರಪ್ಪ ಮತ್ತು ಅದಕ್ಕೂ ಮುಂಚೆ ಶ್ರವಣಬೆಳಗೊಳ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿದ್ಧಲಿಂಗಯ್ಯ ಅವರು ತಮ್ಮ ಭಾಷಣಗಳಲ್ಲಿ ನಾವು ವರ್ತಮಾನದ ಸಂದರ್ಭದಲ್ಲಿ ಎದುರಿಸುತ್ತಿರುವ ಸವಾಲುಗಳ ಬಗ್ಗೆ ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ನಮ್ಮದೆಲ್ಲ ಒಂದೇ ಬಳಗ : ಸಮಾನಾಸಕ್ತರಾಗಿ ಅನೇಕ ನೆಲೆಗಳಲ್ಲಿ ಸಂಗಾತಿಗಳಾಗಿ ಚಳುವಳಿಗಳಲ್ಲಿ ಪಾಲುಗೊಂಡವರು. ಈಗ ನನ್ನ ಕೆಲಸ : ಅವರ ವಿಚಾರಧಾರೆಗಳ ಚುಂಗು ಹಿಡಕೊಂಡು ಸದ್ಯದ ತುರ್ತಿನಲ್ಲಿ ನಾವು ಮುಖಾಮುಖಿಯಾಗಿರುವ ಕೆಲವು ಬಿಕ್ಕಟ್ಟುಗಳ ಬಗ್ಗೆ, ಈಗ ನಾವು ತಳೆಯಬೇಕಾದ ನಿಲುವುಗಳ ಬಗ್ಗೆ ನಿಮ್ಮೆದುರು ನನ್ನ ವಿಚಾರ ಮಂಡಿಸುವುದು– ಸಂಕ್ಷಿಪ್ತವಾಗಿ. (ಸಮ್ಮೇಳನದ ಕೊನೆಯ ದಿನದ 'ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ' ಕಾರ್ಯಕ್ರಮ ಕೂಡ ಸದ್ಯದ ಅಧ್ಯಕ್ಷೀಯ ಭಾಷಣದ ಎರಡನೆಯ ಕಂತು ಎಂಬುದು ನನ್ನ ಭಾವನೆ.)

> ಶಿಕ್ಷಣವು ಸಂಸ್ಕೃತಿಯ ಸ್ವರೂಪ ಸಮಗ್ರವಾಗಿ, ಸಾವಯವವಾಗಿ ಉಳಿಯ ಬೇಕಾದರೆ ಸರಕಾರವೇ ಮಧ್ಯ ಪ್ರವೇಶಿಸಿ, ಭಾಷೆ ಮತ್ತು ಸಾಮಾಜಿಕ ವಿಜ್ಞಾನ, ಶುದ್ಧ ವಿಜ್ಞಾನವನ್ನು ಉಳಿಸಿ ಬೆಳೆಸುವಂಥ ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸ ಬೇಕಾಗುತ್ತದೆ.
>
> **– ಕೆ. ಸತ್ಯನಾರಾಯಣ**



ಏಕೀಕರಣೋತ್ತರ ಸಮ್ಮೇಳನಗಳ ಮತ್ತೊಂದು ವೈಶಿಷ್ಟ್ಯ : ಕನ್ನಡ ಬದುಕಿನ ಅನೇಕ ವಲಯಗಳ ತಜ್ಞರ ಮೂಲಕ ವಿಷಯ ಮಂಡನೆ ಮತ್ತು ಮುಕ್ತ ಚರ್ಚೆ. ಈ ಸಮ್ಮೇಳನದ ಗೋಷ್ಠಿಗಳ ವಿಷಯವ್ಯಾಪ್ತಿ ಗಮನಿಸಿರಿ : ಶಿಕ್ಷಣ; ದಲಿತ ಲೋಕ; ಮಾಧ್ಯಮ; ಮಹಿಳೆ; ಕೃಷಿ; ಸಂಶೋಧನೆ-ವಿಮರ್ಶೆ, ಸಾಮಾಜಿಕ ನ್ಯಾಯ; ಬಹುತ್ವ; ಆಧುನಿಕ ಕರ್ನಾಟಕ ; ಏಕೀಕರಣ; ನೀರಾವರಿ; ಅಲಕ್ಷಿತ ಸಮುದಾಯ; ಜನಪರ ಚಳುವಳಿ; ತಂತ್ರಜ್ಞಾನ: ವಿಜ್ಞಾನ; ಮಕ್ಕಳ ಸಾಹಿತ್ಯ; ಕಲಾಜಗತ್ತು.........ಇತ್ಯಾದಿ.

ಇಷ್ಟೆಲ್ಲ ವಿಷಯಗಳನ್ನು ಕವುಚಿಕೊಂಡು ಕನ್ನಡ ಜನಸ್ತೋಮದ ಸಮಕ್ಷಮದಲ್ಲಿ ಮುಕ್ತ ಸಂವಾದ ಏರ್ಪಡಿಸಬಲ್ಲ ಕನ್ನಡ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆ ಇಡೀ ಪ್ರಪಂಚದಲ್ಲಿ ಎಲ್ಲೂ ಇಲ್ಲ- ಅಂತ ನನ್ನ ಗ್ರಹಿಕೆ.

●

ನಮಗೆ ಇಂದು ಬಹು ದೊಡ್ಡ ಆತಂಕ ಎದುರಾಗಿರುವುದು 'ಭಾಷೆ' ಗಳ ವಲಯ ದಲ್ಲಿ. ಮತ್ತೆ ಮತ್ತೆ ನಮ್ಮ ಚರ್ಚೆ ಗಿರಕಿ ಹೊಡೆಯುವುದು ಸಂಸ್ಕೃತ, ಇಂಗ್ಲಿಷ್, ಹಿಂದಿ ಭಾಷೆಗಳ ಸುತ್ತ. ಭಾಷೆ ಜೀವಂತವಾಗಿ ಉಳಿಯುವುದು ಸಮಕಾಲೀನ ಬದುಕಿನ ಸ್ಥಿತ್ಯಂತರಗಳೊಂದಿಗೆ ನಿರಂತರವಾಗಿ ಸಂಬಂಧ ಇಟ್ಟುಕೊಳ್ಳುವುದರಿಂದ ಮಾತ್ರ. ಇಂಡಿಯಾದಲ್ಲಿ ಒಂದು ಕಾಲಕ್ಕೆ ಜನಸಮೂಹದೊಂದಿಗೆ ಇಂಥ ಸಂಬಂಧ ಇಟ್ಟುಕೊಂಡಿದ್ದ ಸಂಸ್ಕೃತ ಭಾಷೆ ಸಮೃದ್ಧವಾಗಿ ಪ್ರೌಢವಾಗಿ ಬೆಳೆಯಿತು. ಆದರೆ ಕೃತ್ರಿಮವಾದ ಶ್ರೇಷ್ಠತೆಯನ್ನು ತನ್ನ ಮೇಲೆ ಆರೋಪಿಸಿಕೊಂಡು ಬಂದ ಪುರೋಹಿತ ವರ್ಗದ ಸ್ವಾರ್ಥದ ಒಳಸಂಚಿನಿಂದಾಗಿ ಇಂಥದೊಂದು ಪ್ರಬುದ್ಧ ಭಾಷೆ ಓಣಿಯ ಕೂಸಾಗಿ ಬೆಳೆಯದೆ ಕೋಣೆಯ ಕೂಸಾಗಿ ಕೊಳೆಯತೊಡಗಿತು. ಕೇವಲ ಭೂತಕಾಲದ ಜ್ಞಾನಭಂಡಾರವನ್ನು ಸಂಗ್ರಹಿಸಿಡುವ ಬಂಗಾರದ ಕರಂಡಕವಾಯಿತು.

ವರ್ತಮಾನದ ಬದುಕಿನಿಂದಾಗಲಿ, ನೆರೆಹೊರೆಯ ಭಾಷೆಗಳಿಂದಾಗಲಿ ಜೀವಸತ್ವ ವನ್ನು ಹೀರಿಕೊಳ್ಳ ಲಾಗದೆ ಯಾವುದೋ ಒಂದು ಘಟ್ಟದಲ್ಲಿ ಸಂಸ್ಕೃತ ಭಾಷೆ ನಿರ್ಜೀವವಾಗಿ, ಮೃತ ಭಾಷೆಯ ಪದವಿಯನ್ನು ಹೊಂದಿತು.

ಭಾವನೆ ಹಾಗೂ ವಿಚಾರಗಳ ಸೂಕ್ಷ್ಮಾತಿಸೂಕ್ಷ್ಮ ಅಭಿವ್ಯಕ್ತಿಗೆ ಸಮರ್ಥ ಮಾಧ್ಯಮವಾಗಿ ಜಗತ್ತನ್ನೇ ಆವರಿಸಿಕೊಳ್ಳಬಹುದಾಗಿದ್ದ ಸಂಸ್ಕೃತದ ಕತೆ ಇದು. ಚೆನ್ನಾಗಿ ಹಾಗೂ ಕಡ್ಡಾಯವಾಗಿ ಎಲ್ಲರಿಗೂ ಕಲಿಸಿದರೆ ಜಗತ್ತಿನೊಂದಿಗೆ ಅರ್ಥಪೂರ್ಣ ಸಂಬಂಧ ಸ್ಥಾಪಿಸಲು ಅನುವಾಗುವ ಇಂಗ್ಲಿಷ್ ಭಾಷೆ ಇಂದು ನಮ್ಮ ಆಳುಗರ ತಪ್ಪು ನೀತಿಯಿಂದಾಗಿ

ಕೇವಲ ಬಂಡವಲುಶಾಹಿ-ಅಧಿಕಾರಶಾಹಿ-ಪುರೋಹಿತಶಾಹಿಯ ಹುಸಿ ಕಾನ್ವೆಂಟ್ ಸಂಸ್ಕೃತಿಯ ಸೊಕ್ಕಿನ ಕಹಳೆಯಾಗುತ್ತಿದೆ. ಒಂದೂವರೆ ಶತಕದ ಹಿಂದೆ ಈ ಕತ್ತಲೆಯ ಖಂಡಕ್ಕೆ ಸಮಾನತೆ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ವಿಚಾರವಾದ, ಮಾನವತಾವಾದಗಳ ಹೊಸ ಮೌಲ್ಯಗಳನ್ನು ತಂದ ಇಂಗ್ಲಿಷ್ ಭಾಷೆ, ಸ್ವಾತಂತ್ರ್ಯಾನಂತರದ ಇಂಡಿಯಾದಲ್ಲಿ ಒಂದು ಕೃತ್ರಿಮ ಸಂಸ್ಕೃತಿಯನ್ನು ಪ್ರಸಾರ ಮಾಡುತ್ತಿರುವುದು ಆ ಭಾಷೆಯ ದುರಂತವೋ ಈ ದೇಶದ ದುರಂತವೋ ತಿಳಿಯದಂತಾಗಿದೆ. ಕನ್ನಡ, ತಮಿಳು, ಬಂಗಾಲಿ ಭಾಷೆಗಳ ಹಾಗೇ ಇನ್ನೊಂದು ಭಾಷೆಯಾದ ಹಿಂದೀ, ಉತ್ತರ ಭಾರತದ ಹಿಂದೀ ಸರ್ವಾಧಿಕಾರಿಗಳ ಕೈಯಲ್ಲಿನ ದಮನಕಾರಿ ಅಸ್ತ್ರವಾಗುತ್ತಿದೆ. ಕನ್ನಡ ಭಾಷೆಗೆ, ಬದುಕಿಗೆ, ಸಂಸ್ಕೃತಿಗೆ ಪೂರಕ ಶಕ್ತಿಗಳಾಗಬಲ್ಲ ಈ ಮೂರೂ ಭಾಷೆಗಳು -(ಸಂಸ್ಕೃತ, ಇಂಗ್ಲಿಷ್, ಹಿಂದಿ)- ಇಂದು ಕನ್ನಡದ 'ಕಡುವೈರಿ'ಗಳಾಗಿರುವುದಕ್ಕೆ ನಮ್ಮ ಇಂದಿನ ಕೇಂದ್ರೀಕೃತ ವ್ಯವಸ್ಥೆಯೇ ಕಾರಣ.

ನಮ್ಮ ಶಿಕ್ಷಣ ಕ್ರಮದಲ್ಲಿ ಯಾವ ಭಾಷೆಯ ಸ್ಥಾನ ಯಾವುದು ಎಂಬ ವಿಷಯ ಕುರಿತಂತೆ ಹಳೆಯ ಗೊಂದಲಗಳಿಗೆ ಹೊಸ ಗೊಂದಲಗಳು ಸೇರಿಕೊಳ್ಳುತ್ತ ಅಯೋಮಯ ವಾತಾವರಣ ನಿರ್ಮಾಣವಾಗಿದೆ. ಹೈಸ್ಕೂಲು ಪಠ್ಯಕ್ರಮದಲ್ಲಿ ಸಾಂಸ್ಕೃತಿಕ ಸ್ಥಾನಮಾನ ಕುರಿತಂತೆ ನಡೆದ ಏಕೀಕರಣೋತ್ತರ ಅವಧಿಯ ದೊಡ್ಡ ಜನಾಂದೋಲನಕ್ಕೆ 'ಗೋಕಾಕ ವರದಿ' ಯ ಅನುಷ್ಠಾನವೇ ಕೇಂದ್ರ ಬಿಂದುವಾಗಿತ್ತು.

•

'ಸತ್ತಂತಿಹರನು ಬಡಿದೆಚ್ಚರಿಸು' ಎಂದರು ಕುವೆಂಪು. ಕನ್ನಡಿಗರಲ್ಲಿ ಜೀವವಿದೆ. ಚೈತನ್ಯ ವಿದೆ. ಆದರೆ ಅದನ್ನು ಆಗಾಗ ಬಡಿದು ಎಚ್ಚರಿಸಬೇಕು. ಕರ್ನಾಟಕ ಏಕೀಕರಣ ಚಳವಳಿ ಕಾಲದಿಂದಲೂ ಈ ಜಾಗೃತಿಯ ಕ್ರಿಯೆ ನಿರಂತರ ಸಾಗಿದೆ. ಎಂಭತ್ತರ

> ''ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ಅದನ್ನು ಅವರು ಅನುಗ್ರಹಿಸಬೇಕು. ಇವರು ದಯಪಾಲಿಸಬೇಕು ಎಂದು ಅವರಿವರನ್ನು ಕಾಡಿ, ಬೇಡಿ ಗಳಿಸಿಕೊಳ್ಳುವುದಲ್ಲ. ಅದು ನಮ್ಮ ಹಕ್ಕು. ಅನೇಕ ಪ್ರತಿರೋಧಗಳನ್ನು ಎದುರಿಸಿಯೂ ನಾವು ಮತ್ತೆ ಮತ್ತೆ ಈ ಹಕ್ಕನ್ನು ಪ್ರತಿಷ್ಠಾಪಿಸಲು ಹೋರಾಡಬೇಕು.''
>
> **- ಚಂಪಾ**



ದಶಕದ ಗೋಕಾಕ ಚಳುವಳಿ ನಾವೆಲ್ಲ ಕಂಡ, ಪಾಲುಗೊಂಡ, ರಾಜ್ಯದಲ್ಲಿ ರಾಜಕೀಯ ಪಲ್ಲಟ ವನ್ನೇ ಉಂಟುಮಾಡಿದ ಮಹಾ ಸಾಂಸ್ಕೃತಿಕ ಚಳುವಳಿ. ಪ್ರಜ್ಞಾವಂತ ಸಾಹಿತಿಗಳಿಂದ ಪ್ರಾರಂಭವಾದ ಈ ಚಳವಳಿ ಸಮಾಜದ ಸಕಲ ವರ್ಗಗಳನ್ನು ಒಳಗೊಂಡು ಡಾ. ರಾಜಕುಮಾರರ ಪ್ರವೇಶದ ನಂತರವಂತೂ ರಾಜ್ಯವ್ಯಾಪ್ತಿಯನ್ನು ಪಡೆದು ಕನ್ನಡಿಗರಲ್ಲಿ ಆತ್ಮವಿಶ್ವಾಸವನ್ನು, ಆತ್ಮಾಭಿಮಾನವನ್ನು ಚಿಗುರಿಸಿತು. ಈಗಲೂ ಯಾವುದಾದರೂ ಸಮಸ್ಯೆ ಉದ್ಭವಿಸಿದಾಗ 'ಗೋಕಾಕ ಮಾದರಿಯ ಚಳವಳಿ ಮಾಡಬೇಕು' ಎನ್ನುವ ಮಟ್ಟಿಗೆ ಅದೊಂದು 'ಮಾದರಿ' ಆಗಿಬಿಟ್ಟಿದೆ.

ಯಾವ ನಿಟ್ಟಿನಿಂದ ನೋಡಿದರೂ ಗೋಕಾಕ ಚಳುವಳಿ ಒಂದು ಸಮಸ್ತ ಜನಪರ ಚಳುವಳಿಯೇ. ಯಾವುದೇ ಒಂದು ಚಳುವಳಿಯಿಂದ ಸಕಲ ಸಂಕಷ್ಟಗಳು ಪರಿಹಾರ ವಾಗುವುದಿಲ್ಲ, ಆದರೆ ಎಂಥ ಸಮಸ್ಯೆ ಬಂದರೂ ಅದನ್ನು ಅರ್ಥ ಮಾಡಿಕೊಳ್ಳಬಲ್ಲ ವೈಚಾರಿಕ ಪ್ರಜ್ಞೆಯನ್ನು, ಸಂಘಟನೆಗೆ ಅನಿವಾರ್ಯವಾದ ಭಾವನಾತ್ಮಕ ಮತ್ತು ಸೈದ್ಧಾಂತಿಕ ಸ್ಪರ್ಶವನ್ನು, ಸಂಘರ್ಷ ಹೂಡಲು ಬೇಕಾದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವ ಜಾಣ್ಮೆಯನ್ನು ಒಂದು ಚಳುವಳಿ ಇಡೀ ಜನಮಾನಸಕ್ಕೆ ಕಲಿಸಿ ಕೊಡುತ್ತದೆ. ನಿರಂತರ ಪರಿವರ್ತನೆಯ ಹಾದಿಯಲ್ಲಿ ನಿರಂತರ ಚಲಿಸಬೇಕಾದ ಗಾಲಿಗಳಿಗೆ ನಿರಂತರ ಶಕ್ತಿ ನೀಡುತ್ತದೆ.

ಪ್ರಜಾಸತ್ತೆಯಲ್ಲಿ ಜನಶಕ್ತಿಯ ಸಮರ್ಪಕವಾದ ಅಭಿವ್ಯಕ್ತಿಯ ಮೂಲಕ ರಾಜಕೀಯ ಪಲ್ಲಟ ತರಬಹುದು ಎಂಬ ಸಾಧ್ಯತೆ ನಮಗೆ ಗೋಚರಿಸಿದ್ದು ಗೋಕಾಕ ಚಳುವಳಿಯ ಮೂಲಕ. ಅದಕ್ಕೆ ಮೂಲ ಕಾರಣ, ಆ ಚಳುವಳಿಗೆ ಒಂದು ಸಾಮೂಹಿಕ ನಾಯಕತ್ವ ವಿತ್ತು , ಅದು ಸಾಂಸ್ಕೃತಿಕ ಸ್ವರೂಪದ್ದಾಗಿತ್ತು ಎಂಬುದು ಬಹಳ ಮುಖ್ಯವಾದ ಅಂಶ. ಆ ನಾಯಕತ್ವ ಮುಂದುವರೆದಿದ್ದರೆ ಇವತ್ತಿನ ಕರ್ನಾಟಕದ ರಾಜಕೀಯ ಸ್ವರೂಪವೇ ಭಿನ್ನವಾಗಿರುತ್ತಿತ್ತು.

ಗೋಕಾಕ ಚಳುವಳಿ ಎಷ್ಟರಮಟ್ಟಿಗೆ ಯಶಸ್ವಿಯಾಯಿತು ಎಂಬ ಪ್ರಶ್ನೆಗೆ ಸರಳ ಉತ್ತರ ವಿಲ್ಲ. ಆದರೆ, 'ಕನ್ನಡ ಶಕ್ತಿ ಕೇಂದ್ರ'ದ ಮೂಲಕ ದಕ್ಷಿಣ ಕರ್ನಾಟಕದಲ್ಲಿ ಚಳುವಳಿಗೆ ಸೈದ್ಧಾಂತಿಕ ಸ್ಪರ್ಶ ನೀಡುತ್ತಲೇ ಜೀವ ತುಂಬಿದ ಹಿರಿಯ ಚಿಂತಕ ಡಾ. ಚಿದಾನಂದ ಮೂರ್ತಿ ಹೇಳುವ ಮಾತಿದು : ''ಗೋಕಾಕ ಚಳುವಳಿ ಕನ್ನಡಿಗರಲ್ಲಿ ಒಂದು ಒಳ ಎಚ್ಚರ ಮೂಡಿಸಿತು.''

ಚಳುವಳಿ ಉಗ್ರ ಸ್ವರೂಪ ತಳೆದಿದ್ದು ಉತ್ತರ ಕರ್ನಾಟಕದಲ್ಲಿ.

ಅಕ್ಟೋಬರ್ ೧೯೮೦ರಲ್ಲಿ ಸಣ್ಣಗೆ ಸುರುವಾದ ಗೋಕಾಕ ಚಳುವಳಿಗೆ ಅಧಿಕೃತ ಸಾಂಘಿಕ ಸ್ವರೂಪ ಬಂದದ್ದು ಫೆಬ್ರವರಿ ೧೯೮೨ರಲ್ಲಿ. ಆಗ ಧಾರವಾಡದ ಕನ್ನಡ ಕ್ರಿಯಾ ಸಮಿತಿಯ ಪ್ರಥಮ ಅಧ್ಯಕ್ಷರಾಗಿದ್ದವರು ಖ್ಯಾತ ಸಂಶೋಧಕ ಡಾ. ಶಂ.ಬಾ. ಜೋಶಿಯವರು. ನಂತರ ಅವರ ಗೈರುಹಾಜರಿಯಲ್ಲಿ ಚಳುವಳಿಗೆ ಸಾಮೂಹಿಕ ನಾಯಕತ್ವ ನೀಡಿದ ಹಿರಿಯರು : ಆರ್.ಸಿ. ಹಿರೇಮಠ, ಬಸವರಾಜ ಕಟ್ಟೀಮನಿ, ಪಾಟೀಲ ಪುಟ್ಟಪ್ಪ, ಚೆನ್ನವೀರ ಕಣವಿ, ರಾ.ಯ. ಧಾರವಾಡಕರ ಮುಂತಾದವರು. ಅಕ್ಟೋಬರ್ ೧೯೮೧ರ ಮುನ್ನವೇ ಬಿಜಾಪುರ ಜಿಲ್ಲೆ ಸಿಂದಗಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಗುಂಡೂರಾವ್ ಸರಕಾರದ ಕನ್ನಡ ವಿರೋಧಿ ನಿಲುವನ್ನು ಕಟುವಾಗಿ ಟೀಕಿಸಿ ಜನಾಂದೋಲನಕ್ಕೆ ಕರೆ ನೀಡಿದವರು ಗದುಗಿನ ತೋಂಟದಾರ್ಯಮಠದ ಸಿದ್ಧಲಿಂಗ ಮಹಾಸ್ವಾಮಿಗಳು ಎಂಬುದನ್ನು ನಾವೆಂದೂ ಮರೆಯುವಂತಿಲ್ಲ. ನಂತರ ಚಳುವಳಿಯಲ್ಲಿ ನೇರವಾಗಿ ಪಾಲುಗೊಂಡು 'ಕನ್ನಡ ಜಗದ್ಗುರು' ಎಂಬ ಖ್ಯಾತಿ ಪಡೆದವರು ಅವರು.

ಕನ್ನಡ ಸಾಹಿತ್ಯ ಪರಿಷತ್ತು ಅಸ್ತಿತ್ವಕ್ಕೆ ಬರುವ ಮೊದಲೇ ಧಾರವಾಡದಲ್ಲಿ ಸ್ಥಾಪನೆಗೊಂಡಿದ್ದ ಕರ್ನಾಟಕ ವಿದ್ಯಾವರ್ಧಕ ಸಂಘ ೧೯೮೦ರ ದಶಕದ ಗೋಕಾಕ ಚಳುವಳಿಗೆ ಮೊದಲ ಹಂತದಲ್ಲಿ ಆಶ್ರಯ ನೀಡಿದ್ದು ಅರ್ಥಪೂರ್ಣವಾಗಿತ್ತು. ಶಂಬಾ ಅಧ್ಯಕ್ಷತೆಯ ಅ. ಕ. ಕೇಂದ್ರ ಕನ್ನಡ ಕ್ರಿಯಾ ಸಮಿತಿಗೆ ಡಾ. ಎಂ.ಎಂ. ಕಲಬುರ್ಗಿ ಮತ್ತು ಪ್ರೊ. ಚಂದ್ರಶೇಖರ ಪಾಟೀಲ- (ಅಂದರೆ, ನಾನು)- ಪ್ರಧಾನ ಕಾರ್ಯದರ್ಶಿಗಳು. ಒಂದು ನಿರ್ಣಾಯಕ ಹಂತದಲ್ಲಿ ನಮ್ಮೆಲ್ಲರ ಕಣ್ಮಣಿ ವರನಟ ಡಾ. ರಾಜಕುಮಾರ ಅಂದು ಚಳುವಳಿಗೆ ಧುಮುಕಿದ್ದು ನಾಡಿನ ಇತಿಹಾಸದ ರೋಮಾಂಚಕಾರಿ ಘಟನೆ. ನನ್ನ ಜೀವಿತದ ಅತಿ ಮಹತ್ವದ ಭಾಗ ಅದು.

ಡಾ. ವಿ. ಕೃ. ಗೋಕಾಕ : ಗುಂಡೂರಾಯರ ಸರಕಾರ ನೇಮಿಸಿದ ಸಮಿತಿಯ ಅಧ್ಯಕ್ಷರು. ಮೊದಲ ಹಂತದಲ್ಲಿ 'ಗೋಕಾಕ್ ಗೋಬ್ಯಾಕ್' ಎಂಬ ತಮ್ಮ ಶಿಷ್ಯರ ಪ್ರತಿಭಟನೆಗೆ ಸ್ಪಂದಿಸಿ 'ವರದಿ'ಗೆ ಕನ್ನಡದ ದೀಕ್ಷೆ ಕೊಟ್ಟವರು; ವರದಿಯ ಅನುಷ್ಠಾನಕ್ಕಾಗಿ ನಡೆದ ಜನಾಂದೋಲನಕ್ಕೆ ಸಾಕ್ಷಿಯಾದವರು. ಚಳುವಳಿ ಮುಗಿದೊಡನೆ ತಮ್ಮ ಪಟ್ಟ ಶಿಷ್ಯನಿಗೆ (ಅಂದರೆ ನನಗೆ)-ಅವರು ಬರೆದ ಪತ್ರದ ಸಾಲುಗಳಿವು :

> ಕನ್ನಡ, ಕನ್ನಡ ಎಂಬುದು ಬರಿ ಭಜನೆಯಲ್ಲ; ಅದು ಮತ್ತೊಮ್ಮೆ ಕಹಳೆಯಾಗಬೇಕು; ಭೋರ್ಗರೆವ ನಿನಾದವಾಗಬೇಕು; ಪಾಂಚಜನ್ಯವಾಗಬೇಕು.
>
> **- ಚಂಪಾ**



ಪ್ರಿಯ ಚಂದ್ರಶೇಖರ,

*ನನ್ನ ಅಂತಃಕರಣದಲ್ಲಿ ಕುದಿ ಹಿಡಿದಿದ್ದ ಕನ್ನಡತನ ಎಲ್ಲ ತರಹದ ತೊಂದರೆ, ತಪ್ಪು ತಿಳುವಳಿಕೆ, ಘಟನಾ ವೈಚಿತ್ರ್ಯಗಳೊಳಗಿಂದ ಹಾಯ್ದು ಕೊನೆಗೆ ಕನ್ನಡ ನಾಡಿನ ಹೃದಯದಲ್ಲಿ ಸ್ಪಂದಿಸಿ ಪಾವನವಾಯಿತು. ನನ್ನ ೭೩ ವರ್ಷದ ಜಾಗೃತ ೫೫ ವರ್ಷದ ಜೀವನಕ್ಕೇ ಒಂದು ಸಾರ್ಥಕತೆಯನ್ನು ತಂದಿತು. ಈ ಜೀವನದಲ್ಲಿ ಕುದಿ ಯಾವಾಗಲೂ ಸಾಹಿತ್ಯಕ ಸಾಂಸ್ಕೃತಿಕವಾಗಿದ್ದು ನನ್ನ ಕ್ರಿಯಾಶೀಲತೆ ಶೈಕ್ಷಣಿಕ ಆಡಳಿತದಲ್ಲಿ ಅಭಿವ್ಯಕ್ತಿ ಪಡೆದಿದೆ. ಆದರೆ ನನ್ನ ಮುಂದಿನ ಪೀಳಿಗೆಯವರಾದ ಪುಟ್ಟಪ್ಪ, ನೀನು ಹಾಗೂ ಉಳಿದ ಸ್ನೇಹಿತರು ನೇರವಾಗಿ ಆಂದೋಲನದಲ್ಲಿ ಭಾಗವಹಿಸಿ ಅದರಲ್ಲಿ ತೇಜಸ್ಸನ್ನು ತುಂಬಿದಿರಿ. ನಿಮ್ಮ ಘೋಷಣೆಗೆ ಹಾಗೂ ಮುನ್ನಡೆಗೆ 'ಗೋಕಾಕ್' ಎಂಬ ಹೆಸರು ಬರಿ ಒಂದು ಧ್ವಜವಾಯಿತು. ಆ ಆಂದೋಲನಕ್ಕೆ ನಾಡೆಲ್ಲ ಎದ್ದು ಕುಳಿತಿತು. ಎಂಥ ಅನುಪಮ ಸುಖ.......!*

ಒಲವುಗಳು - **ವಿ.ಕೃ.ಗೋಕಾಕ್**

●

ಆ ಅವಧಿಯಲ್ಲಿ ಬರೆದ ನನ್ನದೊಂದು ಹಾಡು : ಮಾರ್ಚಿಂಗ್ ಸಾಂಗ್ :

**ನಾವು ಹೊರಟೆವು ಜೈಲಿಗೆ**

*ದಂತಗೋಪುರದ ಗೋಡೆಯ ಕೆಡವಿ*
*ಮನಸು-ಮನಸುಗಳ ಸೇತುವೆ ಕಟ್ಟಿ*
*ಹೊಟ್ಟೆಕಿಚ್ಚುಗಳ ಅಡವಿಯ ತೊರೆದು*
*ಬಂದೆವು ನಾವು ಬೈಲಿಗೆ ।*
*ಜೈ ಜೈ ಕನ್ನಡ ತಾಯಿಗೆ*
*ನಾವು ಹೊರಟೆವು ಜೈಲಿಗೆ ॥*

ಕಣ್ಣಲಿ ತುಂಬಿದೆ ಕನ್ನಡ ಕನಸು
ಒಡಲಲಿ ಸಿಡಿದಿದೆ ಬೆಂಕೀ ಚೆಂಡು
ಕಪ್ಪು ನೆಲದಲ್ಲಿ ಕಪ್ಪು ನಿಶಾನೆಯ
ನಿಲ್ಲಿಸಿ ಮೈಲು-ಮೈಲಿಗೆ ।
ಜೈ ಜೈ ಕನ್ನಡ ತಾಯಿಗೆ
ನಾವು ಹೊರಟೆವು ಜೈಲಿಗೆ ॥

ಸ್ವಂತ ಮನೆಯಲೇ ತಾಯ ಬಂಧಿಸಿದ
ತಾಯಿಗ್ಗಂಡರ ಬಗ್ಗುಬಡಿಯಲು
ಬರುತಿದೆ ಕನ್ನಡ ಮಕ್ಕಳ ದಂಡು
ಹೆದರದೆ ಗುಂಡೂ ಗೋಲಿಗೆ ।
ಜೈ ಜೈ ಕನ್ನಡ ತಾಯಿಗೆ
ನಾವು ಹೊರಟೆವು ಜೈಲಿಗೆ ॥

೧೯೮೨

●

ಆ ಸಂದರ್ಭದ ಇನ್ನೂ ಒಂದು ಹಾಡಿದು :

## ಕನ್ನಡ ಬೆಳ್ಳಿ ಹಬ್ಬದ ಮೇಳಗೀತೆ

*('ಉದಯವಾಗಲಿ'.......ಪದ್ಯದ ಕ್ಷಮೆ ಕೋರಿ)*

*ಚೆಂದ್ಯಾಗಿ ಒಂದಾದ ಚೆಲುವ ಕನ್ನಡ ನಾಡು*
*ಗಂಟುಕಳ್ಳರ ಕೈಗೆ ಸಿಕ್ಕ ಕತೆ ನೋಡು.*
*ಚೂರಿ-ಸೈಕಲ್ ಚೇನು-ಜಂಗುಹತ್ತಿದ ಬ್ಲೇಡು;*
*ಈ ಪರಶುಧರ ಮಾತೃಹಂತಕರ ನೋಡು.*

*ನೆಲದ ರೈತನಿಗಿಲ್ಲಿ ಸೀದ ಸ್ವರ್ಗಕೆ ರೋಡು.*
*ಕಾರ್ಮಿಕನ ಕರಿಬೆನ್ನು ಹೊಟ್ಟೆಡುಮ್ಮನ ಲೋಡು.*
*ಮಮ್ಮಿ ಡ್ಯಾಡಿಯ ಬೆರಕಿ ಮಾತುಗಳ ಹೈಬ್ರೀಡು.*
*ಹಸಿದ ಬಾಯಿಗೆ ಹಳಸು ಸಂಸ್ಕೃತದ ಲಾಡು.*



*ಪಕ್ಷ ಪಕ್ಷಕೆ ಜಿಗಿವ ಈ ಹನುಮಗಳ ನಾಡು.*
*ನಿದ್ರಾಂಗನೆಯ ತೊಡೆಯೆ ಶಾಸಕರ ಗೂಡು.*
*ವಿಧಾನಸೌಧದ ತುಂಬ ಪಾರ್ಥೇನಿಯಂ ಕಾಡು.*
*ದಿವಾಳಿ ಕಂಪನಿ ಕೃಪಾ ಪೋಷಿತರ ಪಾಡು.*

*ಮಧ್ಯರಾತ್ರಿಗೆ ಕೂಡ ಸುಪ್ರಭಾತದ ಹಾಡು*
*ಹೊಸೆದು ರಾಗವ ತಗೆವ ಕಬ್ಬಿಗರ ಮೂಡು.*
*ಬೆಳ್ಳಿಗದೆಗಳ ಷಂಡ ಓರಾಟಗಾರರ ನೋಡು.*
*ವೀರ್ಯ ಬತ್ತಿಸಿಕೊಂಡು ನಾರೊ ಹೆಣಗಳ ಬೀಡು.*

*ಕಾಲು ಶತಕದ ಕತೆಯ ಕೇಳಿ ನಿದ್ದೆಯ ಮಾಡು,*
*ಇಲ್ಲ ಝಾಡಿಸಿಕೊಂಡು ಎದ್ದು ಸುತ್ತಲು ನೋಡು.*
*ಗುಂಡ್‌ಕಲ್ಲು ಭಂಡರಿಗೆ ಆಳ ಗುಂಡಿಯ ತೋಡು.*
*ಗಂಟುಕಳ್ಳರಿಗಾಗಿ ತಗೊ ಹರಕು ಜೋಡು.*

೧೯೮೧

●

ಅದು ಕಳೆದ ಶತಮಾನದ ೧೯೮೧-೮೨-೮೩. ಶತಮಾನದ ಗಡಿ ಗೆರೆ ದಾಟಿ ೨೦೧೭ರ ಕಾಲ ಬಿಂದುವಿನಲ್ಲಿ ನಿಂತಿದ್ದೇವೆ. ಏಕೀಕರಣದ ಅರವತ್ತನೆಯ ವರ್ಷವಿದು.

- ನಮ್ಮ ಚೆಲುವ ಕನ್ನಡ ನಾಡಿನಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ, ಸದ್ಯದ ವರ್ತಮಾನದಲ್ಲಿ ನಮ್ಮ ನುಡಿಯ ಸ್ಥಾನ ಯಾವುದು?
- ಚಳುವಳಿಗಳಲ್ಲಿ ಹೊರಹೊಮ್ಮಿದ ಜನಾಭಿಪ್ರಾಯಕ್ಕೆ ಮಣಿದು ಆಯಾ ಸರಕಾರಗಳು ಕನ್ನಡ-ಪರವಾದ ಆದೇಶ ಹೊರಡಿಸುತ್ತಲೇ ಇದೆ. ಅವೆಲ್ಲ ಕೋರ್ಟುಗಳ ಕಟಕಟೆಯ ಕಂಬಿಗಳಿಗೆ ಬಡಿದು ವಾಪಸು ಬರುತ್ತಿವೆ. (ನಾಡಿನ ಅನೇಕ ಸಮಸ್ಯೆಗಳ ಪರಿಹಾರಕ್ಕೆ ನ್ಯಾಯಾಂಗ ಅಡ್ಡಿ ಬಂದಿರುವುದು ನಮಗೆ ಗೊತ್ತು.) ಈ ಪ್ರಕ್ರಿಯೆಯಲ್ಲಿ ಒಂದು ಅರಿವು ನಮಗಿರಬೇಕು : ಕನ್ನಡದ ಸಂಕಟಗಳಿಗೆಲ್ಲ ನಮ್ಮ ಕುಲಕಂಟಕರೇ ಕಾರಣ. 'ಕುಲ ಪುರೋಹಿತ' ರನ್ನು ಸಮ್ಮೇಳನಾಧ್ಯಕ್ಷರಾಗಿ ಕಂಡವರು ಮೈಸೂರು ಜನ...........ಈಗ 'ಕುಲ ಕಂಟಕ' ರನ್ನು, 'ಮನೆ ಮುರುಕ' ರನ್ನು ನಮ್ಮ ಮನೆಯಲ್ಲೇ ಎದುರಿಸಬೇಕಾಗಿದೆ.

- ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರ ಹಂತದವರೆಗೆ ಕರ್ನಾಟಕದಲ್ಲಿ ಮಾತೃಭಾಷೆ/ನಾಡಭಾಷೆ 'ಮಾಧ್ಯಮ'ವಾಗಿರಲಿ–ಎಂಬ ಕನಸು ಕಂಡವರು ಕುವೆಂಪು. ಈಗ? ಈಗ ಪ್ರಾಥಮಿಕ ಐದರವರೆಗಾದರೂ ಅದು ಉಳಿಯಲಿ ಅಂತ ಹೋರಾಟ ಮಾಡುವ ಪಾಳಿ ನಮ್ಮದು !
- ಇತ್ತೀಚಿನ ಸುಪ್ರೀಂಕೋರ್ಟಿನ ತೀರ್ಪು ನಿಮಗೆ ಗೊತ್ತು. 'ಮಾತೃಭಾಷೆ ಮಗುವಿನ ಹಕ್ಕು' – ಎಂಬ ಸರಳ ಸತ್ಯಕ್ಕೂ ಕುರುಡಾಗುವ ನ್ಯಾಯಾಂಗ ವರಿಷ್ಠರು ಹೇಳುತ್ತಾರೆ : ''ಮಗುವಿಗೆ ಯಾವ ಮಾಧ್ಯಮ ಎಂದು ನಿರ್ಣಯಿಸುವುದು ಪೋಷಕರ/ತಂದೆ ತಾಯಿಗಳ ಆಯ್ಕೆ.''
- ಒಂದು ನೆಲೆಯ ಸಮಾಧಾನವೆಂದರೆ : ಇದು ಕನ್ನಡಕ್ಕೆ ಮಾತ್ರ ಒದಗಿಬಂದ ಕುತ್ತು ಅಲ್ಲ; ದೇಶದ ಎಲ್ಲ ಭಾಷೆಗಳಿಗೂ ಬಂದಿರುವ ಸಂಕಟ. (ನಮ್ಮ ಮನೆಯಲ್ಲಷ್ಟೇ ಕರಂಟು ಹೋಗಿಲ್ಲ; ಇಡೀ ಊರೇ ಕತ್ತಲೆಯಲ್ಲಿ ಮುಳುಗಿದೆ – ಎಂಬ ಹಾಗೆ) ಸುಪ್ರೀಂಕೋರ್ಟಿನ ತೀರ್ಪು ಬದಲು ಮಾಡುವುದು ಸಂವಿಧಾನ ತಿದ್ದುಪಡಿಯಿಂದ ಮಾತ್ರ.
- ಹೋರಾಟವೇ ಒಂದು ಪರಂಪರೆಯಾಗಿರುವ ಕರ್ನಾಟಕ ಈ ನಿಟ್ಟಿನಲ್ಲಿ ಇಡೀ ದೇಶಕ್ಕೆ ದಾರಿ ತೋರಿಸಬೇಕು– ಎಂಬುದು ನಮ್ಮ – ನಿಮ್ಮ ನಿರೀಕ್ಷೆ.

*

ಚಲನವಲನವೆಂಬುದು ನಿಸರ್ಗದಲ್ಲಿ ಸಹಜವಾಗಿ ನಡೆಯುವ ವಿದ್ಯಮಾನ. ಅದು ಜೀವಂತಿಕೆಯ ಲಕ್ಷಣ. 'ಸಾವು' ಬಂದಾಗಲೇ ಅದರ ಕೊನೆ, ಅಂತ್ಯ. ಈ ಸಹಜ ಲಯಕ್ಕೆ ಒಮ್ಮೊಮ್ಮೆ ವಿಶೇಷವಾದ ವೇಗ ದೊರಕಿದಾಗ ಅದಕ್ಕೆ 'ಚಳುವಳಿ' ಅಂತ ಕರೆಯಬಹುದು. ನನ್ನ ಚಿಂತನೆಗಳಲ್ಲಿ ಮೂಡುವ ಈ ಚಳುವಳಿ ನನ್ನೊಳಗೆ ಸುತ್ತು ಹೊಡೆದು ಹೊಡೆದು ಅಲ್ಲಿಯೇ ಸುಸ್ತಾಗಬಹುದು; ಅಥವಾ ಬಾನುಲಿಯ ತರಂಗಗಳಂತೆ, ಅಂಗಲಂಗಲಾಗಿ ಹಬ್ಬಿ, ವ್ಯಕ್ತಿಯನ್ನೂ ಮೀರಿದ ಇಡೀ ಸಮುದಾಯದ ಚಳುವಳಿಯೂ ಆಗಬಹುದು. ಅಂಥ ಚಳುವಳಿ, ಆಂದೋಲನ, ಇಡೀ ಸಮುದಾಯದ ಇತಿಹಾಸವನ್ನೇ ಪಲ್ಲಟಿಸುತ್ತದೆ. ಮಾನವ ಸಮುದಾಯದ ಇತಿಹಾಸವೆಂದರೆ ಇಂಥ ಪಲ್ಲಟಗಳ ಸರಮಾಲೆ.

ಒಂದು 'ಚಳುವಳಿ' ಚಾಲ್ತಿಯಲ್ಲಿದ್ದರೆ ಆ ವಾತಾವರಣವೇ ಬೇರೆ. ನಾಯಕರಿರುತ್ತಾರೆ. ಭಾಷಣ ಇರುತ್ತವೆ. ಧರಣಿ ಸತ್ಯಾಗ್ರಹ, ಲಾಠೀಚಾರ್ಜು, ಗೋಲೀಬಾರು, ಜೈಲು, ಪತ್ರಿಕೆಗಳಲ್ಲಿ ತಾಜಾ ತಾಜಾ ಖಬರ್, ವಾದ ವಿವಾದ, ಮಂಡನೆ ಖಂಡನೆ. ಇಂಥ ಕೋಲಾಹಲಕಾರಿ ರೋಮಾಂಚಕ ಸನ್ನಿವೇಶದಲ್ಲಿ ಸುಮ್ಮನೆ ಆಕಳಿಸುತ್ತ ಕುಂತವನು ಕೂಡ ತಾನೂ ಏನೋ ಮಾಡುತ್ತಿದ್ದೇನೆ ಎಂಬ ಭ್ರಮೆಯಲ್ಲಿರುತ್ತಾನೆ. ಏನೇ ಸಂಭವಿಸಿದರೂ ಅದರಲ್ಲಿ ತಾನೂ ಪಾಲುಗಾರ ಎಂದುಕೊಳ್ಳುತ್ತಾನೆ.



'ಕನ್ನಡ ಚಳುವಳಿ' ಎಂಬ ಪದಪುಂಜ ನಮ್ಮ ನಾಲಿಗೆಗೆ ಎಷ್ಟು ಹೊಂದಿಕೊಂಡಿದೆಯೆಂದರೆ 'ಕನ್ನಡ' ಮತ್ತು 'ಚಳುವಳಿ' ಪದಗಳು ಅವಳಿ–ಜವಳಿಯೇನೋ ಎನ್ನುವಷ್ಟು. ನಿಜ, ಹಳೆಯ ಇತಿಹಾಸ ನಮಗೆ ಗೊತ್ತಿಲ್ಲ. ಆದರೆ ೧೮ನೆಯ ಶತಮಾನದಿಂದ ಇತ್ತೀಚೆಗೆ 'ಚಳುವಳಿ' ಎಂಬುದಿಲ್ಲದೆ ನಾವು ಏನನ್ನೂ ಪಡೆದಿಲ್ಲ.

'ಕನ್ನಡ ಚಳುವಳಿ' ಎಂಬುದಕ್ಕೆ ಒಂದು ಪರಂಪರೆಯೇ ಇದೆ. ಸ್ವಾತಂತ್ರ್ಯ ಪೂರ್ವದ ಕರ್ನಾಟಕ ಏಕೀಕರಣ ಚಳುವಳಿ ಕನ್ನಡ ಭಾಷಿಕರಲ್ಲಿ ತಮ್ಮ ನುಡಿಯ ಬಗೆಗಿನ 'ಜಾಗೃತಿ'ಯನ್ನೇ ಕೇಂದ್ರದಲ್ಲಿ ಇರಿಸಿಕೊಂಡಿದ್ದು. ಎಂಭತ್ತರ ದಶಕದ ಪ್ರಾರಂಭದಲ್ಲಿ ಇಡೀ ರಾಜ್ಯವನ್ನೇ ಆವರಿಸಿದ ಗೋಕಾಕ ಚಳುವಳಿ ; ಮೂಲದಲ್ಲಿ 'ಸಂಸ್ಕೃತ' ಭಾಷೆಯ ವಿರುದ್ಧವೇ ನಡೆದ ಅಪ್ಪಟ ದೇಸೀ ಚಳುವಳಿ, ಅರ್ಥಾತ್ ಪುರೋಹಿತಶಾಹಿಯ ವಿರುದ್ಧದ ಜನಾಂದೋಲನ. ಗೋಕಾಕ ಚಳುವಳಿಯ ಮುಂದುವರೆದ ಪ್ರಕ್ರಿಯೆ ೨೦೦೫ರಲ್ಲಿ ಕಸಾಪ ನೇತೃತ್ವದ ಮಾತೃಭಾಷಾ ಮಾಧ್ಯಮ ಚಳುವಳಿ. ಇನ್ನೂ ಮಾಡಬೇಕಾದ ಚಳುವಳಿಗಳ ಒಂದು ಪಟ್ಟಿಯೇ ಇದೆ.

ಕನ್ನಡಿಗರೆಲ್ಲ ಅರಿತುಕೊಂಡ ಒಂದು ವಾಸ್ತವವಂತೂ ಇದೆ. ನಮಗೂ ಚಳುವಳಿಗೂ ಬಿಡಲಾರದ ನಂಟು. ಕನ್ನಡ ಚಳುವಳಿ ನಿರಂತರವಾಗಿ ನಡೆಯುತ್ತಲೇ ಇರಬೇಕು. ಅದು ಪಡೆಯಬೇಕಾದ ಆಯಾಮಗಳೆಂದರೆ : 'ಭಾಷಾ' ಕೇಂದ್ರಿತವಾಗದೆ ನಾಡಿನ ಸಮಸ್ತ ಸಮಸ್ಯೆಗಳಿಗೆ ಸ್ಪಂದಿಸಬೇಕು. 'ರಾಜಧಾನಿ' ಕೇಂದ್ರಿತವಾಗದೆ ಇಡೀ ನಾಡಿನ ಭೌಗೋಲಿಕ ವ್ಯಾಪ್ತಿಯನ್ನು ಒಳಗೊಂಡಿರಬೇಕು. 'ದ್ವೇಷ' ಕೇಂದ್ರಿತವಾಗದೆ ಪ್ರೀತಿ, ವಿಶ್ವಾಸ, ಹೃದಯವಂತಿಕೆಗಳ ನೆಲೆಯಲ್ಲಿ ನಡೆಯುವ ಮಾನವೀಯ ಚಳುವಳಿಯಾಗಬೇಕು. ನಾಡಿನ ಸಮಷ್ಟಿ ಜೀವನಕ್ಕೆ ಸಂಬಂಧಿಸಿದ ಪ್ರತಿಯೊಂದು ವಿದ್ಯಮಾನವನ್ನು ಕೂಲಂಕುಷವಾಗಿ ಅಧ್ಯಯನ ಮಾಡಿ, ಸಮಸ್ಯೆಗಳ ಸೂಕ್ತ ಪರಿಹಾರಕ್ಕಾಗಿ ಸುಸಂಘಟಿತ ಪ್ರಯತ್ನವಾಗಿ, ಎಲ್ಲ ಸಮುದಾಯಗಳ ಪಾಲುಗಾರಿಕೆಯನ್ನು ಪಡೆದುಕೊಳ್ಳುವ ಸಮಗ್ರ ಆಂದೋಲನವಾಗಬೇಕು.

●

'ಕನ್ನಡ'- ಎಂಬುದು ಒಂದು ಭಾಷೆಯ ಕೇವಲ ಹೆಸರು ಮಾತ್ರವಾಗಿರದೆ, ಒಂದು ಭೌಗೋಲಿಕಪ್ರದೇಶದಲ್ಲಿ ವಾಸವಾಗಿರುವ ಜನಸಮುದಾಯದ ರಾಜಕೀಯ ಸಾಮಾಜಿಕ – ಸಾಂಸ್ಕೃತಿಕ ಬದುಕಿನ ಐತಿಹಾಸಿಕ ದಾಖಲೆಯಾಗಿರುವುದರ ಜೊತೆಗೆ ಆ ಜನ ಸಮುದಾಯದ ವರ್ತಮಾನವನ್ನು ಸಾವಿರ ನಾಲಿಗೆಗಳ ಮೂಲಕ ಅಭಿವ್ಯಕ್ತಿಸುತ್ತಲೇ ಅದನ್ನು ರೂಪಿಸುವ, ಆ ಮುಖಾಂತರ ಭವಿಷ್ಯದ ಅನಂತ ಸಾಧ್ಯತೆಗಳನ್ನು ತೆರೆಯುವ ಮಾಧ್ಯಮವಾಗಿದೆ. ಹಿಂದಿ, ಇಂಗ್ಲಿಷ್, ಮರಾಠಿ, ಇಟಾಲಿಯನ್- ಇವೆಲ್ಲ ನಾಮ ಸಂಕೇತ ಗಳ ಹಿಂದೆ ಏಕ ಕಾಲಕ್ಕೆ ವೈಯಕ್ತಿಕವೂ- ಸಾಮಾಜಿಕವೂ, ಭೂತವೂ, ವರ್ತಮಾನವೂ, ಅಂತರಂಗವೂ- ಬಹಿರಂಗವೂ ಆದ ಅನುಭವ ಸಮಷ್ಟಿಯ ಧ್ವನಿ ಇರುತ್ತದೆ.

೧೮ನೇ ಶತಮಾನದ ಕೊನೆಯಲ್ಲಿ 'ಶಾಂತಕವಿ' ಕಾವ್ಯ ನಾಮದ ಸಕ್ಕರಿ ಬಾಳಾ ಚಾರ್ಯರು ರಚಿಸಿದ- ''ರಕ್ಷಿಸು ಕರ್ನಾಟಕ ದೇವಿ/ಸಂರಕ್ಷಿಸು ಕರ್ನಾಟಕ ದೇವಿ''- ಎಂಬ ಗೀತ ಬಹುಶಃ ನಮ್ಮ ಮೊಟ್ಟ ಮೊದಲ ನಾಡಗೀತೆ ಇರಬೇಕು. ನಾಡಿನ ರಕ್ಷಣೆ ಗಾಗಿ ಒಂದು ಶತಕದಿಂದಲೂ ನೂರಾರು ಸಂಘಟನೆಗಳು, ವೇದಿಕೆಗಳು ಚಾಲ್ತಿಗೆ ಬಂದಿವೆ. ಗೋಕಾಕ್ ಚಳುವಳಿಯ ನಂತರವಂತೂ, ನಾನು ಕಂಡಂತೆ, ರಾಜ್ಯ – ಜಿಲ್ಲೆ –ತಾಲ್ಲೂಕು ಮಟ್ಟದಲ್ಲಿ ಬೇರೆ ಬೇರೆ ಬ್ಯಾನರುಗಳಲ್ಲಿ, ಸಮಸ್ಯೆ ಉದ್ಭವಿಸಿದಾಗಲೆಲ್ಲ ನಮ್ಮ ಕನ್ನಡ ಪರ ಸಂಘಟನೆಗಳು ಬೀದಿಗಿಳಿದು ಹೋರಾಟ ಮಾಡುತ್ತಲೇ ಬಂದಿವೆ. ಇಂಥ ಹೋರಾಟಗಳಿಗೆ ಈಗ ವ್ಯಾಪಕವಾದ ನೆಲೆ ಬೇಕಾಗಿದೆ. ಕನ್ನಡ ಚಳುವಳಿ ಎಂಬುದು ಕೇವಲ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಉಳಿವಿಗಾಗಿ- ಎಂಬ ಸೀಮಿತ ಚೌಕಟ್ಟನ್ನು ಮೀರಿ ಈ ನಾಡ ಜನತೆಯ ಬದುಕಿನ ಸಕಲ ಮಗ್ಗಲುಗಳನ್ನೂ ತನ್ನ ತೆಕ್ಕೆಗೆ ಒಗ್ಗಿಸಿ ಕೊಳ್ಳಬೇಕಾಗಿದೆ.

ಕ್ಷಿಪ್ರಗತಿಯಲ್ಲಿ ಬದಲಾಗುತ್ತಿರುವ ಇಂದಿನ ಜಗತ್ತಿನಲ್ಲಿ ನಮ್ಮ ದೇಶದ ಸ್ವಾತಂತ್ರ್ಯೋತ್ತರದ ಅರ್ಧ ಶತಮಾನದಲ್ಲಿ ಪರಿಸ್ಥಿತಿ ಮೊದಲಿನಂತಿಲ್ಲ, ಏಕಪಕ್ಷ ಸರ್ವಾಧಿಕಾರದ ಹಂತ ಮಾಯವಾಗಿ ಇಂಡಿಯಾಕ್ಕೆ ನಿಜವಾದ ಫೆಡರಲ್ ಸ್ವರೂಪ ಬರುತ್ತಿರುವುದು, ರಾಜ್ಯಗಳು ಸ್ವಾಯತ್ತತೆಯ ಬೇಡಿಕೆ ಮಂಡಿಸುತ್ತಿರುವುದು, ಭಾಷೆ ಆಧಾರಿತ ರಾಷ್ಟ್ರೀಯತೆಯ ಪರಿಕಲ್ಪನೆ ಹರಡುತ್ತಿರುವುದು – ಇವೆಲ್ಲವುಗಳ ಚೌಕಟ್ಟಿ ನಲ್ಲಿ ಕನ್ನಡ ನಾಡಿನ ಆರ್ಥಿಕತೆ, ರಾಜಕೀಯ, ಸಾಮಾಜಿಕ ವಿನ್ಯಾಸ, ಭಾಷೆಯ ಸ್ಥಿತಿಗತಿಗಳ ಬಗ್ಗೆ ನಾವು ನಮ್ಮ ಕಾರ್ಯಕರ್ತರಿಗೆ ತರಬೇತಿ ನೀಡಬೇಕಾಗಿದೆ. ತಮಿಳರ ವಿರುದ್ಧ ಹೋರಾಡುವುದೇ ಕನ್ನಡ ಚಳುವಳಿ ಎಂಬ ಮಿಥ್ಯೆ ಅಳಿದು ಹೋಗಿ,



ನಮ್ಮ ನಿಜವಾದ ಶತ್ರುಗಳಾದ ಹಿಂದೀ ವಲಯದ ವ್ಯಾಪಾರಿ ವರ್ಗ. ಜಾಗತೀಕರಣದ ಸೋಗಿನಲ್ಲಿ ಬರುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ನಮ್ಮ ದೃಷ್ಟಿಯನ್ನೀಗ ಕೇಂದ್ರೀಕರಿಸಬೇಕಾಗಿದೆ.

ಶತಮಾನಗಳುದ್ದಕ್ಕೂ ಅನೇಕ ಸವಾಲುಗಳನ್ನು ಎದುರಿಸಿಯೇ ಕನ್ನಡ ಭಾಷೆ ಮತ್ತು ಸಂಸ್ಕೃತಿ ಬದುಕಿ ಉಳಿದಿವೆ- ಅಂತ ಕೆಲವರು ಹೇಳುತ್ತಾರೆ. ಅವರ ದೃಷ್ಟಿಯಲ್ಲಿ ಈ ನಿಟ್ಟಿನಲ್ಲಿ ಅನಗತ್ಯ ಆತಂಕ ಬೇಡ; ಆದರೆ ಇವತ್ತಿನ 'ಜಾಗತೀಕರಣ'ದ ಮಹಾ ಆಘಾತವನ್ನು ಅರಗಿಸಿಕೊಳ್ಳುವಷ್ಟು ಶಕ್ತಿ ನಮ್ಮ ಭಾಷೆ ಹಾಗೂ ಬದುಕಿಗೆ ಇದೆಯೇ?

ಇಂದಿನ ಸಮೂಹ ಮಾಧ್ಯಮಗಳಲ್ಲೂ, ಅನೇಕ ಚಿಂತನಾ ವಲಯಗಳಲ್ಲೂ ಕನ್ನಡದ ಅಸ್ತಿತ್ವದ ಬಗ್ಗೆ - ('ಕನ್ನಡ ಬಳಸಿರಿ – ಉಳಿಸಿರಿ – ಬೆಳೆಸಿರಿ'- ಎಂಬ ಘೋಷಣೆ ಗಮನಿಸಿರಿ.) – ಆತಂಕಕಾರೀ ಆಲೋಚನೆಗಳನ್ನು ನಾವು ಕಾಣುತ್ತೇವೆ. ಒಂದು ನೆಲೆ ಯಲ್ಲಿ : ಕನ್ನಡ ಅವಸಾನದ ಅಂಚಿನಲ್ಲಿದೆ ಅಂತ ಗೋಳೋ ಎಂದು ಅಳುತ್ತಾ ಅದರ ಅಂತ್ಯಸಂಸ್ಕಾರದ, ನಂತರದ ಶ್ರದ್ಧಾಂಜಲಿ ಸಭೆಯ ನಿರೀಕ್ಷೆಯಲ್ಲಿ ಕೆಲವರಿದ್ದರೆ, ಇನ್ನೊಂದು ನೆಲೆಯಲ್ಲಿ : ಆಳದ ಬೇರುಗಳಿರುವ ನಮ್ಮ ನುಡಿ ಆಧುನಿಕ ಜ್ಞಾನ – ವಿಜ್ಞಾನ – ತಂತ್ರಜ್ಞಾನಗಳ ಸಾರವನ್ನು ಹೀರಿಕೊಳ್ಳುತ್ತಲೇ ಇಂದಿನ ಪೈಪೋಟಿಯ ಪ್ರಪಂಚದಲ್ಲಿಯೂ ಸರಿಯಾಗಿಯೇ ತಾಲೀಮು ಮಾಡುತ್ತಿದೆ ಎಂಬ ಅದಮ್ಯ ಆಶಾವಾದದಲ್ಲಿ ಹಲವರು. ಎಲ್ಲರದೂ ಪ್ರಾಮಾಣಿಕ ಆಶಯವೇ : 'ಕನ್ನಡದ ಅಸ್ಮಿತೆ' 'ನಿಚ್ಚಂ ಪೊಸತು' ಆಗಿ ಇರಬೇಕೆಂಬುದು. (ಸಮ್ಮೇಳನದ ಗೋಷ್ಠಿಗಳಲ್ಲಿ ಇವೆಲ್ಲಾ ಪ್ರಸ್ತಾಪಗೊಳ್ಳಲಿವೆ.)

''ನೆನವುದೆನ್ನ ಮನಂ ಬನವಾಸಿ ದೇಶಮಂ''- ಎಂದು ಹಾಡಿದ ಪಂಪನಿಂದ ಇಂದಿನ ವರೆಗೂ ಕನ್ನಡದ ನೆಲದ ಹಾಡುಗಳ ಒಂದು ಸರಣಿಯೇ ನಮ್ಮೆದುರಿಗಿದೆ. ನಮ್ಮ ಅಕ್ಷರಲೋಕದ ಯಾವುದೇ ಕಾಲಘಟ್ಟದ ಯಾವುದೇ ಮನೋಧರ್ಮವಿರಲಿ – (ಆಧುನಿಕಯುಗದ ನವೋದಯ–ಪ್ರಗತಿಶೀಲ–ನವ್ಯ- ದಲಿತ – ಬಂಡಾಯಗಳನ್ನೂ ಒಳಗೊಂಡಂತೆ) – ಕನ್ನಡದ ಕೊರಳುಗಳು ಈ ಹಾಡುಗಳನ್ನು ಗುಣಗುಣಿಸುತ್ತಲೇ ಬಂದಿವೆ. ಇದೆಲ್ಲದರ ಪೈಕಿ ತುಂಬ ಸಂಕೀರ್ಣವಾದದ್ದು, ನಮ್ಮ ಅಧಿಕೃತ, ಕುವೆಂಪು- ರಚಿತ ನಾಡಗೀತೆ. ಯಾವುದೇ ಕಾರ್ಯಕ್ರಮಕ್ಕೆ ಮುನ್ನುಡಿಯಾಗಿ ಕನ್ನಡದ ಆವರಣ ವನ್ನು ನಿರ್ಮಿಸುವ ಹಾಡು ಇದು.

ಆದರೆ ಯಾಕೋ ಇತ್ತೀಚೆಗೆ ನಾಡಗೀತೆಯ ಎರಡು ಪದಪುಂಜಗಳು ಎದುರಾದಾಗ ನನ್ನ ನಾಲಿಗೆ ತಡವರಿಸಿದಂತಾಗುತ್ತಿದೆ.

> ಜೈ ಭಾರತ ಜನನಿಯ ತನುಜಾತೆ
>
> ಜಯ ಹೇ ಕರ್ನಾಟಕ ಮಾತೆ ............

ಇಲ್ಲಿ ಕವಿ ಬಳಸುವ ತಾಯಿ – ಮಕ್ಕಳ ಪ್ರತೀಕ (ಮೆಟಫರ್) ಬಹಳ ಧ್ವನಿ ಪೂರ್ಣವಾದುದು : ಇಂಡಿಯಾ ಎಂಬ 'ಒಕ್ಕೂಟ' ದಲ್ಲಿ ಕೇಂದ್ರ – ರಾಜ್ಯಗಳ ನಡುವಣ ಹೊಕ್ಕುಳ – ಬಳ್ಳಿಯ ನಂಟು ಸೂಚಿಸುವಂತದು.

ನನ್ನ ಪ್ರಶ್ನೆ: ಇದು ವಾಸ್ತವವೇ? ಅಥವಾ ಕವಿಯ ಆಶಯ ಮಾತ್ರವೇ?

ಸಂಸ್ಕೃತ–ಇಂಗ್ಲಿಷ್–ಹಿಂದಿಗಳ ಬಗ್ಗೆ ಈಗಾಗಲೇ ಪ್ರಸ್ತಾಪಿಸಿರುವೆ. ಇತ್ತೀಚೆಗೆ 'ನಮ್ಮ ಮೆಟ್ರೋ' ಫಲಕಗಳಲ್ಲಿ ಹಿಂದಿ ಬಳಕೆಯ ಬಗ್ಗೆ ಉಗ್ರವಾಗಿ ಪ್ರತಿಭಟಿಸಿದ ಕನ್ನಡ–ಪರಸಂಘಟನೆಗಳ ಹೋರಾಟವನ್ನು ಬೆಂಬಲಿಸಿದ ಕರ್ನಾಟಕದ ಮುಖ್ಯಮಂತ್ರಿಗಳ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಲುವು ಅಭಿನಂದನೀಯ. 'ಹಿಂದಿ–ಹೇರಿಕೆ' ಎಂಬುದು ಅನೇಕ ದಶಕಗಳಿಂದ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ಸಂಸ್ಥೆಗಳಲ್ಲಿ ನಡೆಯುತ್ತಿರುವ ಪ್ರಕ್ರಿಯೆ. ಸಂವಿಧಾನದಲ್ಲಿ ಎಲ್ಲಿಯೂ ಹಿಂದಿಯನ್ನು 'ರಾಷ್ಟ್ರಭಾಷೆ' ಅಂತ ಹೆಸರಿಸಿಲ್ಲ; ಆದರೂ ಆ ಸುಳ್ಳು ಕಿರೀಟವನ್ನು ಅದಕ್ಕೆ ಹೊರಿಸಿ ಹಿಂದಿಯೇತರ ರಾಜ್ಯಗಳಲ್ಲಿ ಮೆರೆಸಲಾಗುತ್ತಿದೆ. ಇದೊಂದು ತೆರನಾದ ಹಿಂದಿ – ಸಾಮ್ರಾಜ್ಯ ಶಾಹಿಯೇ.

ಇದರಿಂದ ನಮ್ಮ 'ಒಕ್ಕೂಟ'ದ ಪರಿಕಲ್ಪನೆಯ ಚರ್ಚೆಯೇ ಮುನ್ನೆಲೆಗೆ ಬಂದಿದೆ.

ಕನ್ನಡ ಮಾತೆಯನ್ನು ಭಾರತ ಜನನಿಯ 'ತನುಜಾತೆ' ಎಂದು ಕರೆದರು ಕುವೆಂಪು, ಅಂದರೆ 'ಭಾರತ' ಎಂಬ ಅಜ್ಜಿಯ ಮಕ್ಕಳು ನಮ್ಮ ರಾಜ್ಯಗಳು. ಆದರೆ ಈ ಅಜ್ಜಿ ತಾನು ಪಡೆದ ಮಕ್ಕಳಲ್ಲಿ ಕೆಲವರಿಗೆ ಮೊಲೆ ಹಾಲನ್ನು, ಉಳಿದವರಿಗೆ ಬಾಟಲಿ ಹಾಲನ್ನು ಕುಡಿಸುತ್ತಿದ್ದಾಳೆ. ಬಹುಪಾಲು ಹಾಲನ್ನು ಬಹುಶಃ ತಾನೇ ಕುಡಿಯುತ್ತಿರಬೇಕು.

> ಭಾಷೆ ಜ್ಞಾನವನ್ನು ಗಳಿಸಲು ಇರುವ ಒಂದು ಸಾಧನ. ಜ್ಞಾನ ಯಾವ ಭಾಷೆಯ ಮೂಲಕವಾದರೂ ಸಿಗಬಹುದು. ಆದರೆ ನಮ್ಮ ಗುರಿ ಜ್ಞಾನ ಎಂಬುದನ್ನು ಮರೆತ ಜನ ಸಾಧನವನ್ನೇ ಶ್ರೇಷ್ಠವೆಂದು ಭ್ರಮಿಸುತ್ತಿರುವುದು ಶೋಚನೀಯ.
>
> **– ಸಿದ್ಧಲಿಂಗಯ್ಯ**



ಈ ವಿದ್ಯಮಾನದ ಒಡಲೊಳಗಿಂದಲೇ ಇನ್ನೊಂದು ವಾಸನೆ ಇತ್ತೀಚೆಗೆ ದಟ್ಟವಾಗಿಯೇ ಹೊರಸೂಸುತ್ತಿದೆ. ಸದ್ಯ ಕೇಂದ್ರದಲ್ಲಿರುವ 'ಪ್ರಭುತ್ವ'– (ಪ್ರಜಾಸತ್ತಾತ್ಮಕ ರೀತಿಯಲ್ಲಿಯೇ ಅಧಿಕಾರಕ್ಕೆ ಬಂದಿದ್ದರೂ)– 'ಬಹುತ್ವ'ವನ್ನೇ ಬುನಾದಿಯಾಗಿಸಿಕೊಂಡಿರುವ ನಮ್ಮ ಇಂಡಿಯಾ ದೇಶದ ಫೆಡರಲ್ ಸ್ವರೂಪವನ್ನೇ ಅಂದಗೆಡಿಸುತ್ತಿದೆಯೇ ಎಂಬ ಆತಂಕ ಸುರುವಾಗಿದೆ. 'ಒಂದೇ ಭಾಷೆ–ಒಂದೇ ಧರ್ಮ–ಒಂದೇ ಸಿದ್ಧಾಂತ' ಎಂಬ ಧಾಟಿಯಲ್ಲಿ, ನಾವೆಲ್ಲಾ ದಶಕಗಳುದ್ದಕ್ಕೂ ತುಂಬು ಕೊರಳಿನಿಂದ ಹಾಡುತ್ತಿದ್ದ 'ವಂದೇ ಮಾತರಂ' ಗೀತೆಯನ್ನೇ ಈ ಶಕ್ತಿಗಳು ಹೈಜಾಕ್ ಮಾಡಿದಂತಿದೆ : 'ಭಾರತ ಮಾತೆ ಬರೀ ಹಿಂದೂ ಮಾತೆ' ಆಗುತ್ತಿರುವಳೇ ಎಂಬ ಪ್ರಶ್ನೆ ಮೂಡುತ್ತಿದೆ. ನಮ್ಮ ಸಂವಿಧಾನದಲ್ಲಿ ಅಂತರ್ಗತವಾದ ಸ್ವಾತಂತ್ರ್ಯ–ಸಮಾನತೆ–ಸಹಭಾವ–ಸೆಕ್ಯೂಲರಿಸಂ–ಸಾಮಾಜಿಕ ನ್ಯಾಯ ಮುಂತಾದವಕ್ಕೆಲ್ಲ ಕಂಟಕ ಒದಗಿ ಬಂದಂತಿದೆ. 'ಅಭಿವ್ಯಕ್ತಿ ಸ್ವಾತಂತ್ರ್ಯ', 'ವೈಚಾರಿಕತೆ' ಗಳ ಮೇಲೆ ನಡೆಯುತ್ತಿರುವ ದಾಳಿಗಳು, ಪ್ರಶ್ನೆ ಮಾಡುವುದೇ 'ರಾಷ್ಟ್ರದ್ರೋಹ' ಎಂಬಂಥ ಆಪಾದನೆಗಳು ಯಾಕೋ ಒಂದು ಬಗೆಯ ಫ್ಯಾಶಿಜಂ ನಮಗಾಗಿ ಕಾದಿದೆಯೋ– ಎಂಬ ವಾತಾವರಣವನ್ನು ಸೃಷ್ಟಿಸಿವೆ.

ಇವೆಲ್ಲ ವರ್ತಮಾನದ ಸುಡು ಸುಡು ವಾಸ್ತವಗಳು. ತೆರೆದ ಕಣ್ಣುಗಳಿಂದ ಇವನ್ನೆದುರಿಸಿ, ಅರ್ಥಮಾಡಿಕೊಂಡು ಪರಿಹಾರದ ಪ್ರಯತ್ನಗಳತ್ತ, ಹೊರಳುವುದೇ ನಮ್ಮ ಕರ್ತವ್ಯ. ಸ್ವಾತಂತ್ರ್ಯಾನಂತರ ನಾವು ಪ್ರಜ್ಞಾಪೂರ್ವಕವಾಗಿ ಅಪ್ಪಿಕೊಂಡ ಪ್ರಜಾಸತ್ತೆ (ಡೆಮಾಕ್ರೆಸಿ) ನಮ್ಮಲ್ಲಿನ್ನೂ ಜೀವಂತವಾಗಿದೆ. ಪ್ರಜೆಗಳ ಅರಿವಿನ ಅಂತರ್ಜಲದ ಪಾತಳಿ ಹೆಚ್ಚಾಗುತ್ತಲೇ ಇದೆ.

●

ಮತ್ತೊಂದು ಚುನಾವಣೆ ಎದೆಯ ಮೇಲೆ ಬಂದಿರುವ ಈ ಸಂದರ್ಭದಲ್ಲಿ ಕನ್ನಡಿಗರ ಆಯ್ಕೆ ಯಾವುದಿರಬೇಕೆಂಬುದರ ಬಗ್ಗೆ ತಮ್ಮ ಅವಗಾಹನೆಗೆ ಒಂದೆರಡು ವಿಷಯಗಳು :

೧. ಈ ಮುಂಚೆ ವಿವರಿಸಿದ ವಾಸ್ತವಗಳ ಹಿನ್ನೆಲೆಯಲ್ಲಿ– ನಮ್ಮ ಪ್ರಜಾಸತ್ತೆಯನ್ನು, ನಮ್ಮ ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯುವ ಶಕ್ತಿಗಳನ್ನು ಬೆಂಬಲಿ

ಸುವ ಮೂಲಕ – ಸೆಕ್ಯುಲರ್ ಪಕ್ಷಗಳ ಪರವಾಗಿ ನಾವು ಮತ ಚಲಾಯಿಸ ಬೇಕು. (ಆ ಪಕ್ಷ ಈ ಪಕ್ಷ ಎಂದು ಪ್ರತ್ಯೇಕವಾಗಿ ಹೆಸರಿಸುವ ಅಗತ್ಯವಿಲ್ಲ.)

೨. ನಮ್ಮ ರಾಜ್ಯದ ಹಿತಾಸಕ್ತಿಗಳ ಸಂರಕ್ಷಣೆಯ ಹಿನ್ನಲೆಯಲ್ಲಿ ನಮ್ಮ ಆಯ್ಕೆ ಸ್ಪಷ್ಟ ವಾಗಿರಬೇಕು.

‘ಒಕ್ಕೂಟ’ದ ಬಿಕ್ಕಟ್ಟುಗಳ ಬಗ್ಗೆ ಮಾತಾಡಿದ್ದೇವೆ.

ಸ್ವಾತಂತ್ರ್ಯ ನಂತರದ ಐತಿಹಾಸಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನಾವು ಕಾಣುತ್ತಿರುವು ದೇನು? ದಕ್ಷಿಣ ಏಶಿಯಾದ ಬಲಾಢ್ಯವಾದ ಭಾರತ ಉಪಖಂಡವನ್ನಲ್ಲ; ಎಲ್ಲ ನೆಲೆಗಳಲ್ಲಿ ಛಿದ್ರವಾಗುತ್ತಿರುವ ಇಂಡಿಯಾ ದೇಶವನ್ನು. ಬಲಾಢ್ಯ ಕೇಂದ್ರ ಸರ್ಕಾರ ಎಂಬುದು ಈಗ ಹಳೆಯ ನೆನಪು. ಒಬ್ಬ ಜಯಲಲಿತಾ, ಒಬ್ಬ ಚಂದ್ರಯ್ಯ ನಾಯ್ಡು ಒಬ್ಬ ಮಮತಾ ಇಂದು ಒಂದೇ ಒಂದು ಪತ್ರಿಕಾ ಹೇಳಿಕೆಯಿಂದ ಕೇಂದ್ರವನ್ನು ಗಡಗಡ ನಡುಗಿಸಬಹುದು. ಪ್ರಧಾನಿಗೆ ಒಂದೇ ಒಂದು ಚೀಟಿ ಬರೆದು ಕಳಿಸಿ ತಮ್ಮ ರಾಜ್ಯದ ಜನರ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಬಹುದು. ಕರ್ನಾಟಕದ ಇಪ್ಪತ್ತೆಂಟು ಎಂಪಿಗಳು ನಿಯೋಗ ಒಯ್ದು ಏಕಕಂಠದಿಂದ ಬಾಯಿ ಬಾಯಿ ಬಡಕೊಂಡರೂ ಆಗದ ಕೆಲಸವನ್ನು ಈ ರಾಜ್ಯಗಳ ಒಂಟಿ ದನಿಗಳು ಸಾಧಿಸಬಲ್ಲವು.

ಎಲ್ಲಿಂದ ಬರುತ್ತದೆ ಇವರಿಗೆ ಈ ಬಲ? ಉತ್ತರ ಸ್ಪಷ್ಟವಿದೆ. ಇವರ್‍ಯಾರೂ ತಮ್ಮ ತಮ್ಮ ಪಕ್ಷಗಳಲ್ಲಿ ಮೇಲಿನಿಂದ ಹೇರಲ್ಪಟ್ಟವರಲ್ಲ, ನೇರವಾಗಿ ಪಕ್ಷದ ಸದಸ್ಯರಿಂದಲೇ ಆಯ್ಕೆಯಾದವರು. ಅಧಿಕಾರ ಇರಲಿ, ಇಲ್ಲದಿರಲಿ; ಜನಪ್ರಿಯತೆಯನ್ನು ಉಳಿಸಿ ಕೊಂಡು ತಮ್ಮವರ ಸಮಸ್ಯೆಗಳಿಗೆ ಸ್ಪಂದಿಸುವವರು. ಏಕೆಂದರೆ ಇವರ ರಾಜಕಾರಣದ ಬೇರುಗಳಿರುವುದು ತಮ್ಮ ತಮ್ಮ ನೆಲಗಳಲ್ಲಿ; ಇವರು ಬೆಳೆಯುವುದು ತಮ್ಮ ಗೊಬ್ಬರ, ಹವೆ, ನೀರುಗಳಿಂದ.

ನಮ್ಮ ರಾಜ್ಯದ ಕತೆ ನಮಗೆ ಗೊತ್ತೇ ಇದೆ. ಇಲ್ಲಿ ಅಧಿಕಾರಕ್ಕೆ ಬರುವ ಪಕ್ಷಗಳು ‘ರಾಷ್ಟ್ರೀಯ’ ಪಕ್ಷಗಳು, ಇವುಗಳ ಹೆಡ್‌ಆಫೀಸುಗಳೆಲ್ಲ ಇರುವುದು ದೇಶದ ರಾಜಧಾನಿ ಯಲ್ಲಿ. ಮುಖ್ಯಮಂತ್ರಿಗಳು ಆಯ್ಕೆಯಾಗುವುದು ಪಕ್ಷದ ಶಾಸಕರ ಮನಸ್ಸಿನ ಇಚ್ಛೆ ಯಿಂದಲ್ಲ; ಹೈಕಮಾಂಡಿನ ಮನಸುಖರಾಯರ ಲಹರಿಯಿಂದ. ಹೀಗೆ ಪಾರ್ಟಿಯಲ್ಲಿ ಕುಕ್ಕರಿಸಿದ ಮುಖ್ಯಮಂತ್ರಿ ಸದಾ ತನ್ನ ಅಧಿಕಾರ ಉಳಿಸಿಕೊಳ್ಳುವುದನ್ನೇ ಧ್ಯಾನಿಸಬೇಕು. ತನ್ನ ಮಂತ್ರಿಮಂಡಲದ ಒಬ್ಬ ಸಣ್ಣ ಮಂತ್ರಿಯ ಖಾತೆ ಬದಲಾವಣೆಗೂ ಅವನು



ವರಿಷ್ಠರ ಆದೇಶಕ್ಕಾಗಿ ದಿಲ್ಲಿ ಯಾತ್ರೆ ಕೈಗೊಳ್ಳಬೇಕು. ಇಂಥ ರಾಷ್ಟ್ರೀಯ ಪಕ್ಷಗಳ ವರಿಷ್ಠರಿಗಾದರೋ ಬೇರೆ ಬೇರೆ ರಾಜ್ಯಗಳಲ್ಲಿರುವ ತಮ್ಮ ಪಕ್ಷದ ಹಿತಾಸಕ್ತಿಗಳ ರಕ್ಷಣೆಯೇ ಮುಖ್ಯವಾಗಿರುತ್ತದೆ. ಒಟ್ಟಿನ ಪರಿಣಾಮವೆಂದರೆ : ‘ರಾಷ್ಟ್ರೀಯ’ ಪಕ್ಷ ಗಳಿಂದ ನಮ್ಮ ರಾಜ್ಯಕ್ಕೆ ಯಾವ ಕಲ್ಯಾಣವೂ ಆಗಿಲ್ಲ, ಆಗುವಂತಿಲ್ಲ. ಭಾರತದ ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಯಾವುದೇ ಒಂದು ರಾಷ್ಟ್ರೀಯ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಸುಸೂತ್ರವಾಗಿ ಐದು ವರ್ಷ ಸರಕಾರ ನಡೆಸುವಂತಿಲ್ಲ.

ಅನೇಕ ಧರ್ಮ, ಜಾತಿ ಸಮುದಾಯ, ಸಂಸ್ಕತಿಗಳ ಒಕ್ಕೂಟ ನಮ್ಮ ಇಂಡಿಯಾ. ಇಲ್ಲಿ ಏಕಪಕ್ಷೀಯವಾದ ಅಧಿಕಾರ ನಡೆಯಲು ಸಾಧ್ಯವೇ ಇಲ್ಲ. ಈ ಮೂಲಕ ಫೆಡರಲ್ ಸ್ವರೂಪದ ಅರಿವು ಈಗ ನಮಗಾಗುತ್ತಿದೆ. ಆದರಿಂದಲೇ ಕೇಂದ್ರ ಸರಕಾರಗಳು ಶಕ್ತಿ ಕಳಕೊಂಡು, ಪ್ರಾದೇಶಿಕ ಪಕ್ಷಗಳ ಸಹಕಾರಕ್ಕಾಗಿ ಹಾತೊರೆಯಬೇಕಾಗಿದೆ. ಈ ವಾಸ್ತವಕ್ಕೆ ಅನುಗುಣವಾಗಿಯೇ ನಮ್ಮ ರಾಜಕಾರಣದ ವಿನ್ಯಾಸ ಬದಲಾಗತೊಡಗಿದೆ.

ಕೇವಲ ಚಳುವಳಿಗಳ ಮೂಲಕವೇ ಕನ್ನಡದ ಕೆಲಸ ಆಗಬೇಕೇ? ನಮ್ಮ ಅಧಿಕಾರಿ ಗಳ, ಜನಪ್ರತಿನಿಧಿಗಳ, ಮಂತ್ರಿಗಳ ಸಹಜ ಧರ್ಮವಾಗಿ ಕನ್ನಡ ಅರಳಬೇಕು. ಇದು ಸಾಧ್ಯವಾಗುವುದು ನಮ್ಮ ನಾಡಿನಲ್ಲಿ ನಮ್ಮದೇ ಆದ ಒಂದು ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದಾಗ ಮಾತ್ರ. ನಮ್ಮ ನೆಲದ ಸಾರವನ್ನು ಹೀರಿ, ನಮ್ಮ ಹವೆಯ ನ್ನುಂಡು, ನಮ್ಮ ಆಕಾಶದಲ್ಲಿ ನಮ್ಮ ಟೊಂಗೆಗಳನ್ನು ಹರಡಿ, ನಮ್ಮ ಹೂಗಳ ಸುವಾಸನೆ ಬೀರಬಲ್ಲ ಒಂದು ವೃಕ್ಷವಾಗಿ, ಒಂದು ನಿರ್ಣಾಯಕ ರಾಜಕೀಯ ಶಕ್ತಿಯಾಗಿ ನಮ್ಮ ಕನ್ನಡ ಶಕ್ತಿ ಕ್ರೋಡೀಕರಣಗೊಂಡಾಗ ಮಾತ್ರ.

ಕರ್ನಾಟಕಕ್ಕೊಂದು ಪ್ರಾದೇಶಿಕ ಪಕ್ಷ ಬೇಕೇ?– ಎಂಬ ಚಿಂತನೆಗೂ ದಶಕಗಳ ಇತಿಹಾಸ ವಿದೆ. ಈ ದಿಕ್ಕಿನಲ್ಲಿ ಕನ್ನಡ ಹೋರಾಟಗಾರರು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ : ಸಕ್ರಿಯ ರಾಜಕಾರಣಿಗಳು ಕೆಲವರು ತಮ್ಮ ‘ಅಸ್ತಿತ್ವ’ಕ್ಕಾಗಿ ಇಂಥ ಪ್ರಯತ್ನ ಮಾಡಿ ಕೈ – ಬಾಯಿ ಸುಟ್ಟುಕೊಂಡಿದ್ದಾರೆ. ಸದ್ಯಕ್ಕೆ ‘ಹೊಸ’ ಪಕ್ಷದ ಸಾಧ್ಯತೆ ನಮಗಂತೂ ಕಾಣುತ್ತಿಲ್ಲ.

ಕೇವಲ ವೈಯಕ್ತಿಕ ನೆಲೆಯಲ್ಲಿ ನನ್ನದೊಂದು ವಿಚಾರ ಲಹರಿ ಇದು : ಬರಲಿರುವ ಚುನಾವಣೆಯಲ್ಲಿ ಅಧಿಕಾರ ಗದ್ದುಗೆಗೆ ಹತ್ತಿರ ಬರಬಹುದಾದ ಒಂದು ‘ರಾಷ್ಟ್ರೀಯ’ ಪಕ್ಷವನ್ನೇ ನಾವು ಆಯ್ಕೆ ಮಾಡಿಕೊಳ್ಳಬೇಕೆಂದರೆ – ಆ ರಾಷ್ಟ್ರೀಯ ಪಕ್ಷಕ್ಕೆ ಒಂದು

'ಪ್ರಾದೇಶಿಕ ಅಜಂಡಾ' ಇದೆಯೋ ಎಂಬುದನ್ನು ಪರಿಶೀಲಿಸಬೇಕು ರಾಜ್ಯಕ್ಕೆ ಸಂಬಂಧಿಸಿದ ಇಸ್ಯೂಗಳ ಬಗ್ಗೆ ಈ ಪಕ್ಷದ ಒಲವೇನು? ನಿಲುವೇನು? ಪ್ರಣಾಳಿಕೆಯಲ್ಲಿ ಸ್ಪಷ್ಟ ಪ್ರಸ್ತಾಪಗಳಿವೆಯೇ? ಅವರ ಈವರೆಗಿನ ನಡೆ - ನುಡಿಗಳಲ್ಲಿ ಪ್ರಾಮಾಣಿಕತೆ ಇದೆಯೇ? ಇವು ನಮ್ಮ ಒರೆಗಲ್ಲುಗಳಾಗಬೇಕು. ಈ ಪಕ್ಷ ಸಂವಿಧಾನದ ಮೌಲ್ಯಗಳಿಗೆ ಬದ್ಧವಿರುವ **ಸೆಕ್ಯುಲರ್** ಪಕ್ಷವಾಗಿರಬೇಕೆಂದು ಮತ್ತೆ ಹೇಳಬೇಕಾಗಿಲ್ಲ.

●

ಕಳೆದ ಶತಮಾನದ ಎಪ್ಪತ್ತು ಎಂಬತ್ತರ ದಶಕಗಳ ವೈಶಿಷ್ಟ್ಯವೆಂದರೆ : ಆಗಿನ ಸಾಮಾಜಿಕ - ರಾಜಕೀಯ ವಿದ್ಯಮಾನಗಳು ಸಾಹಿತ್ಯಿಕ ಸಾಂಸ್ಕೃತಿಕ ವಿದ್ಯಮಾನಗಳೊಂದಿಗೆ ನೇರವಾಗಿ ತಳಕು ಹಾಕಿಕೊಂಡದ್ದು ಮತ್ತು ಇಂಥ ಅಂತಃ ಪ್ರಕ್ರಿಯೆ ಆ ಪೀಳಿಗೆಗಳ ಬಹುತೇಕ ಸಾಹಿತಿಗಳ ಬದುಕು-ಬರಹಗಳನ್ನು ರೂಪಿಸಿದ್ದು, ಅದು ವ್ಯಕ್ತಿ ನಿಷ್ಠ, ರೂಪನಿಷ್ಠವೆನಿಸಿದ್ದ 'ನವ್ಯ' ಸಾಹಿತ್ಯದ ಅವಸಾನ ಕಾಲ. 'ಸಾಹಿತಿ' ಗಳಿಗೆ ಸಂಬಂಧವೇ ಇಲ್ಲ ಎಂದು ದೂರ ಇಡಲ್ಪಟ್ಟಿದ್ದ ಜಾತಿ-ವರ್ಗ ಮುಂತಾದ ಸಾಮಾಜಿಕ ವಾಸ್ತವಗಳು ರಂಗದ ಮಧ್ಯಕ್ಕೇ ಬಂದ ಸಂಕ್ರಮಣ ಸನ್ನಿವೇಶ. ಹೀಗಾಗಿ ಆ ದಶಕಗಳಲ್ಲಿ ಪ್ರಕಟನೆ ಸುರು ಮಾಡಿದ ಚಿಕ್ಕ ಪತ್ರಿಕೆಗಳು. (ಉದಾ : ಲಹರಿ, ಸಂಕ್ರಮಣ, ಶೂದ್ರ , ಸಾಕ್ಷಿ, ರುಜುವಾತು...) ಕರ್ನಾಟಕದ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಕಡೆಯುವಲ್ಲಿ ಮುಖ್ಯ ಪಾತ್ರ ವಹಿಸಿದವು.

●

ಶತಮಾನ ಹೊಡಮರಳುತ್ತಿದ್ದಂತೆ, ಜ್ಞಾನ-ವಿಜ್ಞಾನ- ತಂತ್ರಜ್ಞಾನಗಳ ನಾಗಾಲೋಟದಿಂದಾಗಿ ಮುದ್ರಣ-ಮಾಧ್ಯಮ, ವಿದ್ಯುತ್ತಿನ ಮಾಧ್ಯಮಗಳ ಜೊತೆಗೇ ಸಾಮಾಜಿಕ ಜಾಲತಾಣಗಳ ಹೊಸ ಲೋಕ ತೆರೆದುಕೊಂಡು ಹೊಸ ಪೀಳಿಗೆಯ ಅಭಿವ್ಯಕ್ತಿಗೆ ಭಿನ್ನ ಹಾದಿ ನಿರ್ಮಾಣಗೊಂಡಿವೆ.

ನವ್ಯ-ದಲಿತ-ಬಂಡಾಯ- ನವ್ಯೋತ್ತರದ ನಂತರದ ಹೊಸ ತಲೆಮಾರಿನ ಬರಹಗಾರರಲ್ಲಿ ಹೊಸ ವಿದ್ಯಮಾನಗಳ ಬಗ್ಗೆ ಗೊಂದಲಗಳಿರುವುದು ಸಹಜ. ಆದರೆ ಅವುಗಳನ್ನು ಎದುರಿಸುವ, ಗ್ರಹಿಸುವ ಮತ್ತು ರೂಪಕಗಳಲ್ಲಿ ಹಿಡಿದಿರುವ ಪ್ರಯತ್ನವೂ ಇದೆ. ಕನ್ನಡ ಸಾಹಿತ್ಯ ಎಂದಿನಂತೆ ''ನಿಚ್ಚಂ ಪೊಸತು'' ಆಗಿಯೇ ಇದೆ. ಹಳೆ ತಲೆಮಾರಿನವರ ಯಥಾ ಪ್ರಕಾರದ ಗೊಣಗಾಟಗಳೂ ಇವೆ. ಅವರು 'ಅಸ್ತಿತ್ವ'ದಲ್ಲಿ ಉಳಿಯಲು ಅಷ್ಟೂ ಮಾಡದಿದ್ದರೆ ಹೇಗೆ?

●



ದಲಿತ-ಬಂಡಾಯದ ಬಗ್ಗೆ ಒಂದು ಮಾತು: ಸುಮಾರು ೧೦-೧೫ ವರ್ಷ ತುಂಬ ಕ್ರಿಯಾಶೀಲವಾಗಿದ್ದ ಬಂಡಾಯ 'ಸಂಘಟನೆ' ಈಗ ಅಸ್ತಿತ್ವದಲ್ಲಿ ಇಲ್ಲ , ನಿಜ. ಆಗ ಎದುರಾಗಿದ್ದ ಸಾವಲುಗಳು ನಮ್ಮ ರಾಜ್ಯದ ಮತ್ತು ದೇಶದ ಚೌಕಟ್ಟಿಗೆ ಸೀಮಿತವಾಗಿದ್ದವು. ಈಗ ಜಾಗತಿಕ ವ್ಯಾಪ್ತಿ ಲಭ್ಯವಾಗಿದೆ ಅದಕ್ಕೆ . ಜಾಗತೀಕರಣ-ಉದಾರೀಕರಣ -ಖಾಸಗೀಕರಣಗಳಿಗೆ ಈಗ ಕೇಸರೀಕರಣ(ಕೋಮುವಾದ)ವೂ ಸೇರಿಕೊಂಡು ಪರಿಸ್ಥಿತಿ ಉಲ್ಬಣಗೊಂಡಿದೆ. ಹೀಗಾಗಿ ಹೊಸ ಪೀಳಿಗೆಯ ಸಂವೇದನೆಗಳಲ್ಲೂ ಆಗಿನ 'ಬಂಡಾಯ'ದ ಆಶಯಗಳು ಪ್ರವಹಿಸುತ್ತಲೇ ಇವೆ- ಎಂಬುದು ಸ್ಪಷ್ಟ... ಇವನ್ನೆಲ್ಲ ಕ್ರೋಡೀಕರಿಸಲು ನಿರ್ದಿಷ್ಟ ದಿಕ್ಕು-ದೆಸೆ ನೀಡಲು ಮತ್ತೆ ಬಂಡಾಯ ಸಂಘಟನೆ ಮರುಹುಟ್ಟು ಪಡೆಯುವುದು ಇಂದಿನ ಅನಿವಾರ್ಯವಾಗಿದೆ.

●

ಕನ್ನಡ ಸಾಹಿತ್ಯ ಪರಿಷತ್ತು ನಮ್ಮ ನಾಡಿನ ಪ್ರಾತಿನಿಧಿಕ ಸಂಸ್ಥೆಯಾಗಿ ಈ ಪ್ರಮಾಣದಲ್ಲಿ ಬಲಾಢ್ಯವಾಗಿ ಬೆಳೆದಿರಲು ಮುಖ್ಯ ಕಾರಣ : ನಮ್ಮ ಭಾಷಿಕ ಸಮುದಾಯ ಇದನ್ನು 'ನಮ್ಮದು' ಎಂದು ಅಪ್ಪಿಕೊಂಡಿರುವುದು. ಜೊತೆಗೆ ಆಯಾ ಕಾಲದ ಪ್ರಭುತ್ವಗಳೂ ಎಲ್ಲ ರೀತಿಯಲ್ಲಿ ಇದನ್ನು ಪೋಷಿಸಿರುವುದರಿಂದ. ನಾಡು ಒಂದಾದ ಮೇಲಂತೂ ಈ ಪ್ರಕ್ರಿಯೆ ತೀವ್ರವಾಗಿದೆ. ಗೋಕಾಕ ಚಳುವಳಿಯ ನಂತರ ಅಧಿಕಾರಕ್ಕೆ ಬಂದ ಜನತಾ ಸರಕಾರ ಕನ್ನಡದ ರಕ್ಷಣೆಗೆಂದೇ 'ಕನ್ನಡ ಕಾವಲು ಸಮಿತಿ'ಯನ್ನು ರಚಿಸಿದ್ದು ಒಂದು ಮಹತ್ವದ ಬೆಳವಣಿಗೆ. (ಶ್ರೀದೇವರಾಜ ಅರಸು ಅವರು 'ವಿಶಾಲ ಮೈಸೂರು' ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದವರು. ಕನ್ನಡ ಪುನರುಜ್ಜೀವನಕ್ಕೆ ನಾಂದಿ ಹಾಡಿದವರು ಅವರೇ.) 'ಕಾವಲು ಸಮಿತಿ' ಕಾಲಾಂತರದಲ್ಲಿ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ' ವಾಯಿತು. ಕಾವಲು ಸಮಿತಿಯ ಮೊಟ್ಟ ಮೊದಲ ಅಧ್ಯಕ್ಷರಾಗಿದ್ದವರು ನಮ್ಮ ಈಗಿನ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ. ಅವರ ಸಾರ್ವಜನಿಕ ಜೀವನ ಸುರುವಾದದ್ದೇ ಸಮಾಜವಾದಿ ಚಳುವಳಿ ಮತ್ತು ಕನ್ನಡ ಚಳುವಳಿಯಲ್ಲಿನ ಪಾಲುಗಾರಿಕೆಯ ಮೂಲಕ. ಅವರ ನೇತೃತ್ವದ ಇಂದಿನ ಸರಕಾರ 'ಕನ್ನಡ -ಕನ್ನಡಿಗ- ಕರ್ನಾಟಕ' ಎಂಬ ಸಮಷ್ಟಿ ಪರಿಕಲ್ಪನೆಗೆ ಹೊಸ ಜೀವ ತುಂಬುವತ್ತ ಇಡುತ್ತಿರುವ ದಿಟ್ಟ ಹೆಜ್ಜೆಗಳನ್ನು ನಾಡು ಗಮನಿಸಿದೆ; ಮೆಚ್ಚಿಕೊಂಡಿದೆ ; ಈ ಹೆಜ್ಜೆ ದಾಪುಗಾಲಿನ ಹೆಜ್ಜೆಯಾಗಲಿ ಎಂದು ಹಾರೈಸಿದೆ.

ಅಧಿಕಾರಕ್ಕೆ ಬಂದ ಎಲ್ಲ ಪಕ್ಷಗಳೂ ಪರಿಷತ್ತಿಗೆ ಎಲ್ಲ ಬಗೆಯ ಅನುಕೂಲ ಒದಗಿಸಿವೆ; ಜೊತೆಗೆ, ಸರಕಾರದ ಅನುದಾನ ಪಡೆದರೂ ಒಂದು ಸ್ವಾಯತ್ತ ಸಂಸ್ಥೆಯಾಗಿಯೇ ಪರಿಷತ್ತು ಬೆಳೆದಿದೆ. ಸರಕಾರಗಳು ಪರಿಷತ್ತಿನ ಆಂತರಿಕ ವ್ಯವಹಾರಗಳಲ್ಲಿ ಅನಗತ್ಯ ಹಸ್ತಕ್ಷೇಪ ಮಾಡುತ್ತಿಲ್ಲ. (ಇತ್ತೀಚಿನ ದಿನಮಾನದಲ್ಲಿ ಇಂಥ ಪ್ರಯತ್ನ ಆಗೀಗ ನಡೆಯುತ್ತಿದ್ದರೂ ಅಂಥದ್ದನ್ನು ವಿಫಲಗೊಳಿಸುವ ಅಂತಃಶಕ್ತಿಯೂ ಪರಿಷತ್ತಿಗಿದೆ.)

ಪರಿಷತ್ತಿನ ಸಮ್ಮೇಳನಗಳ ಕೊನೆಯ ದಿನ ಸ್ವೀಕರಿಸಲಾಗುವ ಗೊತ್ತುವಳಿಗಳ ಬಗ್ಗೆ ಒಂದು ಮಾತು: ಈ ಗೊತ್ತುವಳಿಗಳ ಅನುಷ್ಠಾನ ಆಗುತ್ತಿಲ್ಲ ಎಂಬ ಟೀಕೆ ಸಾರ್ವತ್ರಿಕವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಅನೇಕ ವೇದಿಕೆಗಳಲ್ಲಿ ತಮ್ಮ ಬದ್ಧತೆಯನ್ನು ಮೆರೆದಿದ್ದಾರೆ. ಈ 'ಬದ್ಧತೆ' ಸರಕಾರದ 'ಇಚ್ಛಾಶಕ್ತಿ' ಯಾಗಿ ರೂಪಾಂತರಗೊಳ್ಳಲಿ ಎಂಬುದು ನಮ್ಮೆಲ್ಲರ ಹಕ್ಕೊತ್ತಾಯ.

ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕಾಲಕಾಲಕ್ಕೆ ಅಧ್ಯಕ್ಷರಾಗಿ ಬರುವವರು ಕೂಡ ಕನ್ನಡದ ಕಟ್ಟಾಳುಗಳೇ. ಶ್ರೀ ಸಿದ್ಧರಾಮಯ್ಯನವರ ನಂತರದ ಈ ಪಟ್ಟಿ ಗಮನಿಸಿರಿ : ಸರ್ವಶ್ರೀ ಜ್ಞಾನದೇವ ದೊಡ್ಡಮೇಟಿ; ಪಾಟೀಲ ಪುಟ್ಟಪ್ಪ ; ಕೆ. ಎಚ್. ಶ್ರೀನಿವಾಸ ; ಜಿ. ನಾರಾಯಣ; ಎಚ್. ನರಸಿಂಹಯ್ಯ ; ಚಂದ್ರಶೇಖರ ಪಾಟೀಲ ; ಬರಗೂರು ರಾಮ ಚಂದ್ರಪ್ಪ; ಬಿ. ಎಂ. ಇದಿನಬ್ಬ ; ಸಿದ್ಧಲಿಂಗಯ್ಯ; ಮುಖ್ಯಮಂತ್ರಿ ಚಂದ್ರು ; ಎಲ್. ಹನುಮಂತಯ್ಯ; (ಈಗ) ಎಸ್.ಜಿ. ಸಿದ್ಧರಾಮಯ್ಯ.

ಪ್ರಾಧಿಕಾರದ ಕ್ರಿಯಾಶೀಲತೆಗೆ ವೇಗೋತ್ಕರ್ಷ ತಂದವರು ಪ್ರೊ. ಎಸ್. ಜಿ. ಸಿದ್ಧರಾಮಯ್ಯ. ವಿವಿಧ ವಲಯಗಳಲ್ಲಿ ಕನ್ನಡಕ್ಕಾಗಿ ಹೋರಾಡುತ್ತಿರುವ ವ್ಯಕ್ತಿಗಳನ್ನು ಸಂಘ – ಸಂಸ್ಥೆಗಳನ್ನು ವಿಶ್ವಾಸದಿಂದ ತೆಕ್ಕೆಗೆ ತೆಗೆದುಕೊಂಡು ಸಮರೋಪಾದಿಯಲ್ಲಿ ಶ್ರಮಿಸುತ್ತಿರುವ ಇವರ ಕಾರ್ಯಶೈಲಿ ಅಭಿನಂದನೀಯ.

ಈಗಾಗಲೇ ಪ್ರಾಧಿಕಾರ ಸರಕಾರಕ್ಕೆ ಸಲ್ಲಿಸಿರುವ – (ಅ) ಸರಕಾರಿ ಶಾಲೆಗಳ ಸಬಲೀಕರಣ ವರದಿ, (ಬ) ಸರೋಜಿನಿ ಮಹಿಷಿ ಪರಿಷ್ಕೃತ ವರದಿ ಮತ್ತು (ಕ) ಸರಕಾರದ ಸಾಮಾಜಿಕ ಜಾಲತಾಣದಲ್ಲಿ ಕನ್ನಡ ಅಳವಡಿಕೆಯ ವರದಿ – ಗಳ ಶೀಘ್ರ ಮತ್ತು ಸಮರ್ಪಕ ಅನುಷ್ಠಾನಕ್ಕೆ ನಾನು ಮುಖ್ಯಮಂತ್ರಿಗಳನ್ನು ಆಗ್ರಹಿಸುತ್ತೇನೆ.

•



ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ಆಯ್ಕೆಯಾಗಿ ಬರುತ್ತಿರುವವರು ಕನ್ನಡದ ಕಟ್ಟಾಳುಗಳೇ. (೨೦೦೪-೦೮ರ ಅವಧಿಯಲ್ಲಿ ನನ್ನ ಮಿತಿ ಹಾಗೂ ಸಾಧ್ಯತೆಗಳ ಚೌಕಟ್ಟಿನಲ್ಲಿ ಈ ಜವಾಬ್ದಾರಿ ನಿರ್ವಹಿಸಿದ ತೃಪ್ತಿ ನನ್ನದು.) ಸಂಸ್ಥೆಗಳ ಬದುಕಿನಲ್ಲೂ ಬಿಕ್ಕಟ್ಟುಗಳು ಬರುವುದು ಸಹಜ. ಅವುಗಳನ್ನು ಸ್ಥೈರ್ಯದಿಂದ ನಿಭಾಯಿಸುವ ಕೆಚ್ಚು ಕೂಡ ಕನ್ನಡಿಗರ ಅಂತಃಶಕ್ತಿಯಿಂದ ಬರಲು ಸಾಧ್ಯ ಎಂಬುದು ನನ್ನ ಅನುಭವದ ಮಾತು. ಈಗಿನ ಅಧ್ಯಕ್ಷ ಡಾ. ಮನು ಬಳಿಗಾರ್ ಅವರು ನನಗೆ ಅತ್ಯಂತ ಆತ್ಮೀಯರು. ಆಡಳಿತದ ಅಪಾರ ಅನುಭವ, ಸೂಕ್ಷ್ಮ ಸಾಹಿತ್ಯಿಕ ಸಂವೇದನೆ, ಅಗಾಧ ಕ್ರಿಯಾಶೀಲತೆ ಮತ್ತು ಬಹುಮುಖೀ ಸಮುದಾಯ ಪ್ರಜ್ಞೆ– ಇವು ನಾನು ಅವರಲ್ಲಿ ಕಂಡ ಗುಣ ವಿಶೇಷಗಳು. ಅವರು ಕೈಕೊಂಡ ಯೋಜನೆಗಳೆಲ್ಲ ಪೂರ್ಣಗೊಳ್ಳಲಿ; ಅವರು ಕಂಡ ಕನಸುಗಳೆಲ್ಲ ನನಸಾಗಲಿ. ಈ ಕನಸುಗಳು ಅವರ ಮೂಲಕ ನಾವು ಕಂಡ ಕನಸುಗಳು.

•

ಪ್ರಿಯ ಸಂಗಾತಿಗಳೇ,

ಹಂಚಿಕೊಳ್ಳಲು ಇನ್ನೂ ಹಲವಾರು ವಿಷಯಗಳಿವೆ. ಆದರೆ ಅಧ್ಯಕ್ಷೀಯ ಭಾಷಣದ ಪುಟಮಿತಿ ಮತ್ತು ಸಮ್ಮೇಳನದ ಈ ಪ್ರಾರಂಭಿಕ ಹಂತದ ಕಾಲದ ಮಿತಿ– ಇವು ನನ್ನ ಗಮನದಲ್ಲಿವೆ. ಕೊನೆಯ ದಿನದ 'ಸಂವಾದ' ಕಾರ್ಯಕ್ರಮದಲ್ಲಿ ಹೆಚ್ಚಿನ ಚರ್ಚೆಗೆ ಅವಕಾಶ ಸಿಕ್ಕೀತೆಂದು ಆಶಿಸೋಣ.

ಸದಾ ಹರಿಯುವ ನದಿ : ನನ್ನ ಬದುಕಿನ ಮತ್ತು ನನ್ನ ಬರಹದ ಒಂದು ಚಿರಂತನ ಪ್ರತೀಕ (ಮೆಟಫರ್). ಚಳುವಳಿ ಅಂದರೆ ಅದೊಂದು ನದಿ. 'ಭೂಮಿಗೆ ಮಳೆಯ ಹಾಗೆ ಬದುಕಿಗೆ ಚಳುವಳಿ ಬೇಕು'–ಇದು ಹಿರಿಯರೊಬ್ಬರ ಮಾತು. ನಾಡಿನ ಅನೇಕ ಚಳುವಳಿಗಳು ನನ್ನ ಮಾತನ್ನು, ಅಕ್ಷರಗಳನ್ನೂ ವ್ಯಕ್ತಿತ್ವವನ್ನೂ, ಬದುಕನ್ನು ರೂಪಿಸಿವೆ.

ನಮ್ಮನ್ನು ಮತ್ತೆ ಮತ್ತೆ ಕಾಡುತ್ತಿರುವ ಚಳುವಳಿ : ಕಳೆದ ಶತಮಾನದ ಎಂಬತ್ತರ ದಶಕದ ಗೋಕಾಕ ಚಳುವಳಿ . ಆ ಸಂದರ್ಭದಲ್ಲಿ ನನ್ನೊಳಗಿಂದ ಉದ್ಭವಿಸಿದ ನನ್ನದೊಂದು ಕವನ 'ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ'.

೮೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣ

–ಅದು ನನ್ನ ಕವನವಲ್ಲ : ನಿಮ್ಮೆಲ್ಲರ, ನಮ್ಮೆಲ್ಲರ ಕವನ.

**ಕನ್ನಡ ಕನ್ನಡ ಬರ್ರಿ, ನಮ್ಮ ಸಂಗಡ**

ಎಲ್ಲೆಲ್ಲೂ ಉಸಿರಬೇಕು
ನಮ್ಮ ನುಡಿ ಕನ್ನಡ
ಸಿರಿನಾಡನು ಕಟ್ಟಲಿಕ್ಕೆ
ಬರ್ರಿ ನಮ್ಮ ಸಂಗಡ

ಕೈಯ ತುಂಬ ಕೆಲಸ ಬೇಕು
ಬೇಕು ಹೊಟ್ಟೆಗನ್ನ
ಅಕ್ಷರಗಳ ಕನ್ನ ಕೊರೆದು
ಬರಲಿ ಅರಿವು-ಚಿನ್ನ

ಮೈಯ ತುಂಬ ಬಟ್ಟೆಬೇಕು
ನೆತ್ತಿಗೊಂದು ಆಸರ
ಭೂಮಿ ತುಂಬ ಬಿತ್ತಬೇಕು
ತನ್ನ ಬೆಳಕು ನೇಸರ

ತಲೆಯ ತುಂಬ ಬೆಂಕಿ ತುಂಬಿ
ಮಿಂಚಬೇಕು ಕಂಗಳು
ಎದೆಯ ತುಂಬಿ ತುಳುಕಬೇಕು
ಪ್ರೀತಿಯ ಬೆಳದಿಂಗಳು

ಇಂಥ ನಾಡು ಕಟ್ಟಬೇಕು
ಬರ್ರಿ ನಮ್ಮ ಸಂಗಡ
ಎಲ್ಲೆಲ್ಲೂ ಮೊಳಗಬೇಕು
ಕನ್ನಡ ಕನ್ನಡ

**ಕನ್ನಡ ಕನ್ನಡ ಬರ್ರಿ, ನಮ್ಮ ಸಂಗಡ**

ನಿಮಗೆಲ್ಲ ಧನ್ಯವಾದಗಳು.

●

೮೩.ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣ